ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಪೊಲೀಸ್ ಇಲಾಖೆ ಕಾನೂನು ಇಲಾಖೆಯ ಅಡಿಯಲ್ಲಿ ಬರುತ್ತದೆ.

ಅಧ್ಯಕ್ಷರು :- ನನಗಂತೂ ಏನು ಅರ್ಥವಾಗುತ್ತಿಲ್ಲ. ಎಲ್ಲಾ ಶಾಸಕರೂ ಕೂಡ ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ನಿಮ್ಮ ಸಮಸ್ಯೆಗಳನ್ನು ಕೇಳುವುದಾಯಿತಲ್ಲಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಾವು ಇನ್ನೇನು ಅರ್ಥ ಮಾಡಿಕೊಳ್ಳಬೇಕೆಂದು ಗೊತ್ತಿಲ್ಲ.

ಅಧ್ಯಕ್ಷರು :- ಮಾನ್ಯ ಧ್ರುವನಾರಾಯಣರವರೆ ತಾವು ಮಾತನಾಡಿ.

ಶ್ರೀ ಆರ್. ಧ್ರುವನಾರಾಯಣ್ (ಸಂತೇಮರಳ್ಳಿ):- ಮಾನ್ಯ ಅಧ್ಯಕ್ಷರೇ, ಕಾನೂನು ಸುವ್ಯವಸ್ಥೆ ಬಗ್ಗೆ ನಮ್ಮ ಉಪ ನಾಯಕರಾದ ಶ್ರೀ ಟಿ.ಬಿ.ಜಯಚಂದ್ರರವರು ಮಾತನಾಡುವ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರವರ ಹೆಸರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಈ ಭಯೋತ್ಪಾದನೆ ವಿಚಾರವಾಗಿ ಅವರಲ್ಲಿ ಅರಿವು ಮೂಡಿಸುವುದಕ್ಕೆ ಈಗಾಗಲೇ ಚಾಲನೆ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಭಯೋತ್ಪಾದನೆ ಜೊತೆಗೆ ಅದಕ್ಕಿಂತ ಭೀಕರವಾಗಿ ಅಸ್ಪೃಶ್ಯತೆ ಬಹಳಷ್ಟು ತಾಂಡವವಾಡುತ್ತಿದೆ. ಅಸ್ಪೃಶ್ಯತೆ ಇವತ್ತಿಗೂ ಕೂಡ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಬಹಳ ಜೀವಂತವಾಗಿರುವಂಥದ್ದು. ಪ್ರತಿಯೊಂದು ಗ್ರಾಮದಲ್ಲೂ ಕೂಡ ಒಂದು ಕೆರೆಯಿದ್ದರೆ ಆ ಕೆರೆಯಿಂದ ಅಸ್ಪೃಶ್ಯರು ನೀರು ತೆಗೆದುಕೊಂಡು ಹೋಗುವುದಕ್ಕೆ ಅವಕಾಶಗಳಿಲ್ಲ. ಇಂಥ ಸಂದರ್ಭದಲ್ಲಿ ನಾನು ರಾಜ್ಯ ಸರ್ಕಾರದವರಿಗೆ ಮನವಿ ಮಾಡತಕ್ಕಂಥದ್ದು ಈ ಅಸ್ಪೃಶ್ಯತೆಯ ವಿರುದ್ಧ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ತಾವು ಯಾವ ರೀತಿ ಈ ಒಂದು ಭಯೋತ್ಪಾದನೆಯ ವಿರುದ್ಧವಾಗಿ ಜನಜಾಗೃತಿ ಮೂಡಿಸುವಲ್ಲಿ ಈ ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವಿರೋ ಇದನ್ನು ಕೂಡ ಮಾಡಬೇಕು ಎನ್ನುವ ಒತ್ತಾಯವನ್ನು ಮಾನ್ಯ ಅಧ್ಯಕ್ಷರ ಪರವಾಗಿ ಸರ್ಕಾರದಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) :- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಈ ಕರಾವಳಿ ಜಿಲ್ಲೆಗಳು ಒಂದು ರೀತಿಯಾಗಿ ಸುರಕ್ಷಿತವಾಗಿಲ್ಲದಿರುವ ಒಂದು ಸನ್ನಿವೇಶದಲ್ಲಿ ಆಂತರಿಕ ಹಾಗು ಬಾಹ್ಯವಾಗಿರುವಂಥ ಟೆರರಿಸಂ ಚಟುವಟಿಕೆಯ ನೆಲೆಗಳು, ಕೊಂಡಿಗಳು ಅಲ್ಲಿ ಬೇರೂರುತ್ತಿರುವ ಒಂದು ಹಿನ್ನೆಲೆಯಲ್ಲಿ ಸರ್ಕಾರ ವಿಶೇಷವಾಗಿರುವಂಥ ಮುತುವರ್ಜಿಯನ್ನು ವಹಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕಳಕಳಿಯಿಂದ ವಿನಂತಿಸುತ್ತಿದ್ದೇನೆ. ಬೇನಾಮಿ ಹೆಸರಿನಲ್ಲಿ ಆಸ್ತಿ

ಖರೀದಿ, ಖೋಟಾ ನೋಟುಗಳ ವಿತರಣೆ, ಮಾದಕ ದ್ರವ್ಯಗಳ ವಿತರಣೆ, ಬೇರೆ ಬೇರೆ ರೀತಿಯಲ್ಲಿ ಪ್ರಚೋದಕವಾಗಿರುವಂಥ ಜಿಹಾದಿ ಕೇಂದ್ರೀಕೃತವಾಗಿರುವಂಥ ಚಟುವಟಿಕೆಗಳು. ಶಸ್ತ್ರಾಸ್ತ್ರಗಳ ಸಾಗಣೆ ಕೂಡ ಈ ಕಡೆಯಲ್ಲಿ ಆಗುತ್ತಿದೆ ಎನ್ನುವ ಹಿನ್ನೆಲೆಯಲ್ಲಿ ಬಹುಶ: ನಾವು ಎಷ್ಟು ಎಚ್ಚರಿಕೆಯಿಂದ ನಮ್ಮ ವ್ಯವಸ್ಥೆಯನ್ನು ಸುಧಾರಣೆಗೊಳಿಸಬೇಕು. ಕರಾವಳಿ ಕಾವಲು ಪಡೆಯನ್ನು ಯಾವ ರೀತಿ ಸುಧಾರಣೆಗೊಳಿಸಬೇಕು. ಅಲ್ಲಿರುವ ಪೊಲೀಸ್ ವ್ಯವಸ್ಥೆಯನ್ನು ಹೇಗೆ ಸುಧಾರಣೆಗೊಳಿಸಬೇಕು ಎನ್ನವುದು ಮಾತ್ರವಲ್ಲ. ಅಲ್ಲಿರುವಂಥ ಪೊಲೀಸ್ ಹಾಗು ಗುಪ್ತಚರ ವ್ಯವಸ್ಥೆಯನ್ನು ಯಾವ ರೀತಿ ಸುಧಾರಣೆಗೊಳಿಸಬೇಕೆಂಬ ಬಗ್ಗೆ ಸರ್ಕಾರ ವಿಶೇಷವಾಗಿರುವಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಇತ್ತೀಚೆಗೆ ಮ್ಯಾಗಜೈನ್ ಹಾಗು ಚಾನೆಲ್‌ಗಳಲ್ಲಿ ಬಂದಿರುವ ವರದಿಗಳ ಆಧಾರದಲ್ಲಿ ಐ.ಎಸ್.ಐ. ಕೇಂದ್ರೀಕೃತವಾಗಿರುವ ಚಟುವಟಿಕೆ ಇವತ್ತು ಯುವಕರನ್ನು ಮಾತ್ರ ಕೇಂದ್ರೀಕೃತ ಮಾಡುತ್ತಿಲ್ಲ. ಹತ್ತು ವರ್ಷದ ಮಕ್ಕಳಿಗೂ ಕೂಡ ತಲೆಯಲ್ಲಿ ಈ ವಿಷಯವನ್ನು ಹಾಕುವಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು, ಅಲ್ಲದೆ ಹೆಣ್ಣುಮಕ್ಕಳಿಗೂ ಕೂಡ ಈ ಬಗ್ಗೆ ಪ್ರಚೋದಿಸಬೇಕು ಎಂದು ಹೇಳುವಂಥ ಹಿನ್ನೆಲೆಯಲ್ಲಿ ಅನೇಕ ಯೋಜನೆಗಳನ್ನು ಮಾಡುತ್ತೇವೆ ಎನ್ನುವಂಥ ಹಿನ್ನೆಲೆಯಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕ ರಾಜ್ಯ ಕರಾವಳಿ ಜಿಲ್ಲೆಗಳ ಬಗ್ಗೆ ಸತತವಾಗಿ ಕಾರ್ಯಕ್ರಮಗಳನ್ನು ರೂಪಿಸುವ ಅವಶ್ಯಕತೆ ಇದೆ. ಉಗ್ರಗಾಮಿಗಳ ಆಶ್ರಯ ತಾಣಗಳು ಎಲ್ಲೆಲ್ಲಿವೆ. ಯಾರು ಇವರಿಗೆ ಆಶ್ರಯ ಕೊಡುತ್ತಿದ್ದಾರೆ. ಯಾರು ಇದಕ್ಕೆ ಸಂಬಂಧಪಟ್ಟಂತೆ ಫೈನಾನ್ಸ್ ಮಾಡುವಂಥ ವ್ಯಕ್ತಿಗಳು ಇದ್ದಾರೆ. ಈ ರೀತಿ ಸ್ಲೀಪರ್ ಸೆಲ್‌ಗಳ ಮೂಲಕ ಯಾರು ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ಸರ್ಕಾರ ಶೀಘ್ರದಲ್ಲಿಯೇ ಕಾರ್ಯಾಚರಣೆ ಮಾಡಿಕೊಂಡು ಅದನ್ನು ಹಿಡಿಯುವಂಥ ಕೆಲಸ ಮಾಡಬೇಕಾಗಿದೆ. ಅದೇರೀತಿ ನಮ್ಮ ರಾಜ್ಯದಲ್ಲಿ ನಾನು ಹಿಂದೆ ಪ್ರಶ್ನೋತ್ತರ ಸಮಯದಲ್ಲಿ ಕೇಳಿದ ಹಿನ್ನೆಲೆಯಲ್ಲಿ ಎಷ್ಟು ಪಾಕ್ ಹಾಗು ಬಾಂಗ್ಲಾ ಪ್ರಜೆಗಳು ನಮ್ಮ ರಾಜ್ಯದಲ್ಲಿ ಅಕ್ರಮವಾಗಿ ವಾಸ ಮಾಡಿಕೊಂಡಿದ್ದಾರೆ, ಅವರ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಯಾವ ರೀತಿ ಅವರನ್ನು ಹೊರ ಹಾಕುವ ನಿಟ್ಟಿನಲ್ಲಿ ಯೋಜನೆ ಮಾಡಿದೆ, 300 ಕಿ.ಮೀ. ಉದ್ದದ ಕರಾವಳಿ ಭಾಗ ಇವತ್ತು ಸೂಕ್ಷ್ಮ ಪ್ರದೇಶವಾಗಿರುವ ಹಿನ್ನೆಲೆಯಲ್ಲಿ ಯಾವ ರೀತಿಯಲ್ಲಿ ಭದ್ರತೆಯ ವ್ಯವಸ್ಥೆ ಮಾಡಬಹುದು, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಅಂದರೆ ಸೆಟಲೈಟ್ ಮೂಲಕವಿರಬಹುದು, ರಾಡಾರ್ ವ್ಯವಸ್ಥೆ

ಮೂಲಕವಿರಬಹುದು ಯಾವುದರ ಮೂಲಕ ಈ ಬಗ್ಗೆ ಎಚ್ಚರಿಕೆಯನ್ನು ವಹಿಸಿಕೊಳ್ಳಬಹುದು ಎಂಬುದರ ಬಗ್ಗೆ ಸರ್ಕಾರ ಖಂಡಿತವಾಗಿ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಕೋಸ್ಟಲ್ ಗಾರ್ಡ್‌ಗೆ ಸಂಬಂಧಪಟ್ಟಂತೆ ನಾನು ಅಲ್ಲಿರುವ Fishermenಗೆ ಸಂಬಂಧಪಟ್ಟವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂಥ ಪ್ರೊಸೆಸ್ ಮಾಡಿದರೆ ಅನೇಕ ಸಂದರ್ಭದಲ್ಲಿ ಮಧ್ಯರಾತ್ರಿ ಬೋಟ್‌ಗಳು ಬಂದು ಸಿಗ್ನಲ್‌ಗೆ ಹಾಯುವುದನ್ನು ಗಮನಿಸಿ ಅದನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಿ, ಆ ಇಲಾಖೆ ಕಾರ್ಯಾಚರಣೆ ಮಾಡುವುದರೊಳಗೆ ಸಾಕಷ್ಟು ಒಂದು ಅಂತರದಲ್ಲಿ ಅವು escape ಆಗಿರುವ ಹಿನ್ನೆಲೆಯಲ್ಲಿ ಅಲ್ಲಿರುವ ಮೀನುಗಾರಿಕೆ ಬಂದರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯವನ್ನು ಮಾಡಿಕೊಡುವಂತೆ ಸರ್ಕಾರ ಎಚ್ಚರ ವಹಿಸಬೇಕು. ವಿಶೇಷವಾಗಿ ರಾಜೀವ್ ಗಾಂಧಿ ಹಂತಕರನ್ನು ಪತ್ತೆ ಹಚ್ಚಿದ ಕೀರ್ತಿ ಯಾರಿಗೆ ಎಂದರೆ, ಪೊಲೀಸ್ ಇಲಾಖೆಗೆ hint ಕೊಟ್ಟಿರುವವರು ಒಬ್ಬ ಹಾಲು ಮಾರಾಟ ಮಾಡುವಂಥ ಮಹಿಳೆ. ಆ ಹಾಲು ಮಾರಾಟ ಮಾಡುವ ಮಹಿಳೆ ಕೊಟ್ಟಿರುವ clues ಆಧಾರದ ಮೇಲೆ ಆ ಹಂತಕರನ್ನು ಹಿಡಿಯಲಿಕ್ಕೆ ಸಾಧ್ಯವಾಯಿತು. ಇವತ್ತು ಸಮಾಜ ಮತ್ತು ಸರ್ಕಾರ ಎಚ್ಚರಿಕೆಯಿಂದ ಇದ್ದರೆ ಮಾತ್ರ ಈ ಒಂದು ಅಪಾಯವನ್ನು ನಾವು ಎದುರಿಸಲಿಕ್ಕೆ ಸಾಧ್ಯವಾಗುತ್ತದೆ. ನಾನು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಇಡೀ ಮಹಾತ್ಮ ಗಾಂಧೀಜಿ, ನೆಹರು ಎಲ್ಲರ ಬಗ್ಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಒಂದು ರೀತಿಯಲ್ಲಿ ಚೈತನ್ಯ, ಪ್ರೇರಣೆಯನ್ನು ಕೊಟ್ಟಂಥ ಸ್ವಾಮಿ ವಿವೇಕಾನಂದರ ಜಯಂತಿ ದಿವಸ ಯುವ ಜನರಲ್ಲಿ, ವಿದ್ಯಾರ್ಥಿಗಳಲ್ಲಿ ಒಂದು ಜನ ಜಾಗೃತಿ ತರುವಂತಹ ಕಾರ್ಯಕ್ರಮವನ್ನು ಸರ್ಕಾರ ತಂದಿರುವುದಕ್ಕೆ ಅಭಿನಂದಿಸಿ ಬಹುಶ: ಮುಂದಿನ ದಿವಸಗಳಲ್ಲಿ ಪ್ರತಿ ತಾಲ್ಲೂಕು ಹಾಗು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಬೇಕು. ಈ ಕಾರ್ಯಕ್ರಮವನ್ನು ಎಲ್ಲರನ್ನೂ ಒಗ್ಗೂಡಿಸುವ ನಿಟ್ಟಿನಲ್ಲಿ ಹೇಗೆ ಮಾಡಬೇಕೆಂಬ ಬಗ್ಗೆ ಯೋಚಿಸೋಣ. ಮೊನ್ನೆ ಮಂಗಳೂರಿನಲ್ಲಿ 35,000 ವಿದ್ಯಾರ್ಥಿಗಳು ಭಾಗವಹಿಸಿ ನಡೆಸಿದ ಕಾರ್ಯಕ್ರಮ ಬಹಳ ರೋಮಾಂಚಿತವಾಗಿತ್ತು. ಬಹುಶ: ಮುಂದಿನ ದಿವಸಗಳಲ್ಲಿ ಎಲ್ಲರಿಗೂ ಪ್ರೇರಣೆ ಕೊಡುವಂಥ ಕಾರ್ಯಕ್ರಮ ಅಲ್ಲಿ ನಡೆದಿದೆ. ಈ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಆ ಕಾರ್ಯಕ್ರಮವನ್ನು ನೋಡಿದ್ದಲ್ಲಿ ಖಂಡಿತವಾಗಿಯೂ ಅದನ್ನು ಶ್ಲಾಘನೆ ಮಾಡಿ ಬೇರೆ ಕಡೆಯಲ್ಲಿಯೂ ಇಂಥ ಕಾರ್ಯಕ್ರಮವನ್ನು ಮಾಡಬೇಕೆಂದು ಹೇಳುತ್ತಿದ್ದರು. ಇಂಥ ಒಂದು ಕಾರ್ಯಕ್ರಮಕ್ಕೂ ಸರ್ಕಾರ ಚಾಲನೆ ಕೊಡಬೇಕೆಂಬ

ಮಾತನ್ನು ಹೇಳುತ್ತಾ ಇದರ ಜೊತೆಯಲ್ಲಿ ನಕ್ಸಲೈಟ್ ಬೆದರಿಕೆಯನ್ನು ಎದುರಿಸುವಂಥ ಹಿನ್ನೆಲೆಯಲ್ಲಿಯೂ ಸರ್ಕಾರ ವಿಶೇಷವಾದ ಕಾರ್ಯಕ್ರಮವನ್ನು ಮಾಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು :- ನಿಮ್ಮ ಪಕ್ಷದ ಸೂಚನೆಯ ಪ್ರಕಾರ ಯಾರ್ಯಾರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಅದರಂತೆ ಅವರಿಗೆ ನಾನು ಅವಕಾಶ ಕೊಡುತ್ತಿದ್ದೇನೆ. ಎಲ್ಲರೂ ಮಾತನಾಡಬಯಸುತ್ತಾರೆ. ಎಲ್ಲರಿಗೂ ಅವಕಾಶ ಕೊಡಲಿಕ್ಕೆ ಸಮಯ ಇಲ್ಲ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ಅಧ್ಯಕ್ಷರೆ, ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಿ. ನಿಲುವಳಿ ಸೂಚನೆಗೆ ನಾವು ಸಹ ಸಹಿ ಹಾಕಿದ್ದೇವೆ. ನಮಗೂ ಸಹ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :- ನಾನೇನು ಆಗಲೇ ಸೂಚಿಸಿದ್ದೇನೆ. ಎಲ್ಲಾ ಶಾಸಕಾಂಗದ ಪಕ್ಷಕ್ಕೆ ನಾನು ಅಧಿಕಾರ ಕೊಟ್ಟಿದ್ದೇನೆ. ಅವರು ಯಾವ ಲಿಸ್ಟ್ ಕಳುಹಿಸುತ್ತಾರೆ ಅದರ ಪ್ರಕಾರ ನಾನು ಅವಕಾಶ ಕೊಡುತ್ತೇನೆ. ಎಲ್ಲರಿಗೂ ಎಲ್ಲದಕ್ಕೂ ಅವಕಾಶ ಕೊಡಬೇಕೆಂದರೆ ಆಗುವುದಿಲ್ಲ. ಉಳಿದ ವಿಷಯಗಳ ಬಗ್ಗೆ ಕೂಡ ಮಾತನಾಡಬೇಕಾಗಿದೆ. ಈ ರೀತಿ ಹಠ ಮಾಡಬಾರದು.

ಶ್ರೀ ನೆ.ಲ. ನರೇಂದ್ರಬಾಬು :- ಅವರದಾದ ಮೇಲೆ ನನಗೆ ಎರಡು ನಿಮಿಷ ಅವಕಾಶ ಕೊಡಿ, ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ) :- ನಮ್ಮ ಪಕ್ಷದ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದ ವಿಷಯದಲ್ಲಿ ಇನ್ನು ಸ್ವಲ್ಪ ಮುಂದೆ ಹೋಗಿ ಸನ್ಮಾನ್ಯ ಯೋಗೀಶ್ ಭಟ್, ಬಿಜೆಪಿಯ ಸದಸ್ಯರು ಕೂಡ ಕರಾವಳಿ ಪ್ರದೇಶದಲ್ಲಿ ಏನೇನು ಆಗುತ್ತಿದೆ, ಸರ್ಕಾರ ಏನೇನು ಮಾಡಬೇಕು ಎಂದು ಅವರಿಗೂ ಕೂಡ ಆತಂಕವಿದೆ. ನನಗೇನೆಂದರೆ ಸನ್ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಈ ರಾಜ್ಯದಲ್ಲಿ Law and Order problem improve ಆಗುತ್ತದೆ ಎಂದು ನಾನು ಭಾವಿಸಿದ್ದೆ. ಸಭಾಧ್ಯಕ್ಷರೇ, ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಗಮನ ಕೊಡಬೇಕು. Director

General of Police ಎಂದು ಕರ್ನಾಟಕದಲ್ಲಿ ಮಾಡಿದ್ದೀರಿ. ಈಗ ಮುಂದಿನ ತಿಂಗಳಿನಿಂದ ಹೊಸ ಆಫೀಸರ್ ಶ್ರೀ ಅಜಯ್‌ಕುಮಾರ್ ಸಿಂಗ್‌ರವರು ಬರುತ್ತಿದ್ದಾರೆ. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರೊಬ್ಬ ಒಳ್ಳೆಯ ಅಧಿಕಾರಿ. ಆದರೆ ಸನ್ಮಾನ್ಯ ಯಡಿಯೂರಪ್ಪನವರು ಡಿ.ಜಿ. ಆಫೀಸ್‌ನಲ್ಲಿ ನಡೆಯುತ್ತಿರುವ corruption ಬಗ್ಗೆ ನೋಡಬೇಕು. ಟೆರರಿಸಂ ಬಗ್ಗೆ ಫೈಟ್ ಮಾಡುವುದಕ್ಕೆ ದೇವನಹಳ್ಳಿಯ ಬಳಿ ಕಮಾಂಡೋ ಟ್ರೈನಿಂಗ್ ಫೋರ್ಸ್ ಮಾಡಿ ಎಂದು ಹಣ ಮಂಜೂರಾದರೆ ಈ ಹಣ ಬೇರೆ ಕಡೆ ಡೈವರ್ಟ್ ಆಗುತ್ತಿದೆ. ಮಾನ್ಯ ಸಭಾಧ್ಯಕ್ಷರೇ, ಡಿ.ಜಿ. ಆಫೀಸ್‌ನಲ್ಲಿ ಸುಮಾರು ಐದಾರು ವರ್ಷಗಳಿಂದ ಟೆಲಿ ಕಮ್ಯುನಿಕೇಷನ್ improvement ಮಾಡಬೇಕೆಂದು ಹೇಳಿ ಸುಮಾರು 1.35 ಲಕ್ಷ ರೂ.ಗಳನ್ನು ವಿಪ್ರೋ ಕಂಪೆನಿಗೆ ಕೊಟ್ಟಿದ್ದೀರಿ. ಅವರು ಏನು improvement ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. 2005ರ ವೇಳೆಗೆ ನಿಮ್ಮ Modern tele communications scheme complete ಆಗಬೇಕಾಗಿತ್ತು. ಇದುವರೆಗೂ ಕಂಪ್ಲೀಟ್ ಆಗಿಲ್ಲ. ಮೊದಲು ಆ ಹೆಡ್ ಆಫೀಸನಲ್ಲಿ ಸರಿಮಾಡಿಸಿ. There is more politics, ರಾಜಕೀಯ ಈ ಖಾದಿಗಿಂತ ಖಾಕಿಯಲ್ಲಿ ಜಾಸ್ತಿ ಇದೆ. ಯಾವ ಆಫೀಸರ್‌ಗೆ ಒಳ್ಳೆಯ ಪೋಸ್ಟ್ ಸಿಗುವುದಿಲ್ಲ. ಎಲ್ಲಾ ಅಧಿಕಾರಿಗಳಿಗೆ ಒಳ್ಳೆಯ ಪೋಸ್ಟ್ ಕೊಡಲಿಕ್ಕಾಗುವುದಿಲ್ಲ. ಆದರೆ ಒಬ್ಬ ರಾಜಕಾರಣಿ ಎಲೆಕ್ಷನ್‌ನಲ್ಲಿ ಸೋತಿರುತ್ತಾರೆ. ಅವರ ಮುಖ ಒಂದು ರೀತಿಯಾಗಿರುತ್ತದೆ. A man who has lost election, ಮಿನಿಸ್ಟರ್ ಆಗಿರುವುದಿಲ್ಲ. ಆದರೆ ಪೊಲೀಸಿನವರಿಗೆ ಏನು ರೋಗವೆಂದು ನನಗೆ ಗೊತ್ತಿಲ್ಲ. ಯಾವ ಅಧಿಕಾರಿಗಳಿಗೆ ಒಳ್ಳೆಯ ಪೋಸ್ಟ್ ಸಿಕ್ಕಿಲ್ಲವೆಂದರೆ perks and privileges ಕೊಟ್ಟು ಒಂದು ಒಳ್ಳೆಯ ಆಫೀಸ್ ಕೊಟ್ಟರೆ ಆತ ನಗು ನಗುತ್ತಾ ಇರುತ್ತಾನೆ. ಅವರಿಗೆ ಚೀಫ್ ಸೆಕೆಟರಿ ಬಹಳ ಒಳ್ಳೆಯವರು, ಡಿ.ಜಿ., ಹೋಮ್ ಸೆಕ್ರೆಟರಿ ಬಹಳ ಒಳ್ಳೆಯವರು, ಚೀಫ್ ಮಿನಿಸ್ಟರ್ ಬಹಳ ಒಳ್ಳೆಯವರು.

ಒಳ್ಳೆಯ perks and privileges ಕೊಟ್ಟು ಅವರಿಗೆ ಒಳ್ಳೆಯ officer post ಕೊಟ್ಟರೆ ಅವರು ಚೆನ್ನಾಗಿ ನಗುನಗುತ್ತಾ ಇರುತ್ತಾರೆ. ಆಗ ಅವರಿಗೆ Chief Secretary ಬಹಳ ಒಳ್ಳೆಯವರು, D.G ಬಹಳ ಒಳ್ಳೆಯವರು, Home Secretary ಬಹಳ ಒಳ್ಳೆಯವರು, Chief Minister ಬಹಳ ಒಳ್ಳೆಯವರು. ಆದರೆ, ಯಾವ ಅಧಿಕಾರಿಗೆ ಒಳ್ಳೆಯ post ಸಿಗುವುದಿಲ್ಲ. ಅವರು D.G Officeನಲ್ಲಿ ಕುಳಿತುಕೊಂಡಿರಬೇಕಲ್ಲಾ.

He is like a politician, who has lost the election. ಮುಖ ಕೆಟ್ಟದಾಗಿ ಮಾಡಿಕೊಂಡು Chief Secretaryಯವರನ್ನು ಬೈಯ್ದುಕೊಂಡು, Home Secretary ಯವರನ್ನು ಬೈಯ್ದುಕೊಂಡು ಅವರೇ story plant ಮಾಡುವುದು. ಮಾನ್ಯ ಯಡಿಯೂರಪ್ಪ ಸಾಹೇಬರೇ, ನೀವು D.G Officeನಲ್ಲಿ ಏನು ನಾಟಕ ನಡೆಯುತ್ತಿದೆ ಅದನ್ನು ನಿಲ್ಲಿಸಬೇಕು. ಮಾನ್ಯ ಸಭಾಧ್ಯಕ್ಷರೆ, ನನಗೆ ಅತ್ಯಂತ ನೋವಾಗುತ್ತಿರುವುದೇನೆಂದರೆ, Law and Order problem ಬರುತ್ತಾ ಬರುತ್ತಾ ಏನಾಗುತ್ತಿದೆಯೆಂದರೆ, ನಾನು ಸುಮಾರು 6 ತಿಂಗಳುಗಳಿಂದ ನೋಡಿಕೊಂಡು ಬರುತ್ತಿದ್ದೇನೆ. ನಾನು ಇವತ್ತು ಬಹಳ ಹೆಮ್ಮೆಯಿಂದ ಹೇಳಬಹುದು. ಇವತ್ತು ಯೋಗೇಶ್‌ಭಟ್‌ರವರು ಕರಾವಳಿ ಪ್ರದೇಶದಲ್ಲಿ ಏನೇನು ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. 1998ನೇ ಇಸವಿಯಲ್ಲಿ ನಾನು Home Minister ಆಗಿದ್ದಾಗ, I was the First Home Minister in this country to set up coastal police force. ಉಡುಪಿಯಲ್ಲಿ Head Quarters ಎಂದು ಮಾಡಿ, 1998ರಲ್ಲಿ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ Coastal Police Force ಎಂದು ನಾನು ಸ್ಥಾಪನೆ ಮಾಡಿದ್ದೆ. ಈಗ 2005ನೇ ಇಸವಿ ಆದ ಮೇಲೆ ಈಗ Coastal Police Force ಬಗ್ಗೆ ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. ಇತ್ತೀಚೆಗೆ ನಾನು ನೋಡಿಕೊಂಡು ಬರುತ್ತಿರುವುದೇನೆಂದರೆ, ಬಿಜಾಪುರದಲ್ಲಿ ಏನು ಘಟನೆ ನಡೆಯಿತು, ಮುರುಕ್‌ಮುಲ್ಲಾನಲ್ಲಿ ಏನು ಘಟನೆ ನಡೆಯಿತು. ನನ್ನ Assembly ಕ್ಷೇತ್ರದ ಪಕ್ಕದಲ್ಲಿ ಮುನಿರೆಡ್ಡಿಪಾಳ್ಯ ಮಸೀದಿಯಲ್ಲಿ ಮತ್ತು ಅದೇ ದಿವಸ ಹೆಬ್ಬಾಳ ಮಸೀದಿ ಹತ್ತಿರ ಬೆಳಿಗ್ಗಿನ ಜಾವ 5.30 ಗಂಟೆಗೆ ನಮಾಜ್‌ಗೆ ಬರುವುದಕ್ಕೆ ಮುಂಚೆ ಜನ ಹಂದಿ ಮಾಂಸ ತೆಗೆದುಕೊಂಡು ಬಂದು ಅಲ್ಲಿ ಬಿಸಾಡಿ ಹೋಗಿರುತ್ತಾರೆ. ಅಲ್ಲಿ ಗಲಾಟೆ ಆಗುತ್ತೆ. ಆಗ ನಾವೆಲ್ಲಾ ಹೋಗಿ ಪೊಲೀಸಿನವರಿಗೆ ಸಹಾಯ ಮಾಡುತ್ತೇವೆ. ಸರ್ಕಾರಕ್ಕೆ ಸಹಾಯ ಮಾಡುತ್ತೇವೆ. ನಾವು ಅಲ್ಲಿ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಕಂಟ್ರೋಲ್ ಮಾಡುವುದಕ್ಕೆ ಹೋಗುತ್ತೇವೆ. ಆದರೆ, 4 ದಿವಸಗಳು ಕಳೆದ ಮೇಲೆ ಅಲ್ಲಿ ಒಬ್ಬ ಆದಿಮನಿ ಎನ್ನುವ ಒಬ್ಬ ಎ.ಸಿ.ಪಿ. ಕೆಲವು ಹುಡುಗರನ್ನು arrest ಮಾಡಿದ್ದಾರೆ. ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಆ ಆಫೀಸರಿಗೆ reward ಕೊಡಬೇಕಾಗಿತ್ತು. ಕೆಲವು ಹುಡುಗರನ್ನು ಅವರು arrest

ಮಾಡಿಕೊಂಡು ಬಂದರು. ಆದರೆ, ಪೊಲೀಸಿನವರನ್ನು ಕರೆದು ಶಹಭಾಷ್‌ಗಿರಿ ಕೊಡುವ ಬದಲು 4 ದಿವಸಗಳಲ್ಲಿ ಪತ್ತೆ ಹಿಡಿದಿದ್ದೀರಿ ಎಂದು ಹೇಳಿ ಅವರಿಗೆ immediate ಆಗಿ transfer ಮಾಡಿದ್ದಾರೆ. R.T.Nagar ACP Mr.Adimani, Who was responsible for apprehending this criminal. 4 ದಿನಗಳಲ್ಲಿ ಅವರಿಗೆ reward ಸಿಕ್ಕಿದ್ದೇನೆಂದರೆ, ಅಲ್ಲಿಂದ ಅವನಿಗೆ ಬೇರೆ ಕಡೆಗೆ transfer ಮಾಡಿದ್ದಾರೆ. ಈ ರೀತಿಯ bad message ಪೊಲೀಸ್ ಇಲಾಖೆಯಲ್ಲಿ ಹೋಗುತ್ತಿದೆ, a number of transfers have taken place. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಳಿಸಿಕೊಳ್ಳಬೇಕು. 6 ತಿಂಗಳುಗಳಿಂದ Number of Sub-Inspectors, Number of Head constables, Number of constables, Number of ACP's, Number of DSP's ಎಷ್ಟು ಜನರಿಗೆ ಪೊಲೀಸ್ ಇಲಾಖೆಯಲ್ಲಿ transfer ಆಗಿದೆ. ಒಬ್ಬ ಆಫೀಸರ್ ಅಲ್ಲಿ report ಮಾಡುವುದಕ್ಕೆ ಹೋದರೆ ಮತ್ತೆ ಇನ್ನೊಂದು order ಬರುತ್ತದೆ. ಬೇಡ ಬೇಡ ನೀವು report ಮಾಡಿಕೊಳ್ಳಬೇಡಿ. Hold on, ಅಲ್ಲಿ ಹೋಗಿ report ಮಾಡಿ ಎಂದು ಹೇಳುತ್ತಾರೆ. ಎಸ್.ಪಿ. ಅಲ್ಲಿ report ಮಾಡುವುದಕ್ಕೆ ಹೋದರೆ ಅವರಿಗೆ D.G Officeನಿಂದ ಹಾಗೂ Home Secretary ಯಿಂದ ಹೋಗಬೇಡಿ ಎಂದು message ಬರುತ್ತದೆ. ಮಾನ್ಯ ಸಭಾಧ್ಯಕ್ಷರೆ, ಬರೀ transfersನಲ್ಲಿ ಸಮಯ ಕಳೆದರೆ Law and Order maintain ಮಾಡುವುದಕ್ಕಾಗುತ್ತದೆಯೇ? ಕರ್ನಾಟಕ ರಾಜ್ಯದಲ್ಲಿ I.B.ರವರು ಮತ್ತು RAW ಅವರ ಜೊತೆಯಲ್ಲಿ ಇವರಿಗೆ ಸರಿಯಾದ ಸಂಪರ್ಕ ಇಲ್ಲ. ಈ ದೇಶದಲ್ಲಿ I.B. Intelligence ಯಾರಿದ್ದಾರೆ ಹಾಗೂ RAW agencies ಏನಿದೆ? ಸರ್ಕಾರದಿಂದ ಅವರಿಗೆ ಹಣ ಎಷ್ಟು ಕೊಡುತ್ತಾರೆ? ಅಮೆರಿಕಾದಲ್ಲಿ CIA is answerable to the U.S Congress. ಒಂದು ವರ್ಷಕ್ಕೆ ಎಷ್ಟು ಹಣವನ್ನು Secret Service ನವರಿಗೆ CIA ಯವರು ಖರ್ಚು ಮಾಡುತ್ತಾರೆಂದರೆ, they are answerable to the U.S Congress. Unfortunately ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಎಷ್ಟು ದುಡ್ಡು ಖರ್ಚು ಮಾಡುತ್ತೇವೆಂದು I.B.ಯವರು ಯಾರು responsible ಇಲ್ಲ. RAW ಅವರದ್ದನ್ನು ಯಾರು

ಕೇಳುವವರಿಲ್ಲ. Parliament ನಲ್ಲಿ ಒಂದು Oversight Committee ಮಾಡಿ ಇದರ ಬಗ್ಗೆ lobby ಮಾಡುತ್ತಿದ್ದೇವೆ. ಇವರು ಬಂದು ಉತ್ತರ ಕೊಡಬೇಕೆಂದು ಮಾಡಿದ್ದೇವೆ. ಅದೇ ರೀತಿ State Assemblyಗೆ Intelligence Agencies answerable ಆಗಬೇಕು. ಎಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಸುಮ್ಮನೆ ಜೇಬಿನಲ್ಲಿ ಹಣ ಇಟ್ಟುಕೊಂಡು, ಬೆಂಗಳೂರಿನಲ್ಲಿ ಒಳ್ಳೆಯ ಮನೆಗಳನ್ನು ಇಟ್ಟುಕೊಂಡು, ಬೆಂಗಳೂರಿನಲ್ಲಿ ಸೈಟ್ ಬಿಸಿನೆಸ್ ಮಾಡಿಕೊಂಡು, Real Estate Agentsಗಳಾಗಿ ಬಿಟ್ಟಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ದೊಡ್ಡ ದೊಡ್ಡ ಆಫಿಸರ್ಸ್ law and order, terrorism ಇರುವುದರಿಂದ ಹೇಗೆ ಫೈಟ್ ಮಾಡುತ್ತಾರೆ. ಅತ್ಯಂತ ನೋವಾಗುತ್ತಿರುವುದೇನೆಂದರೆ, ಈ ಚರ್ಚ್‌ಗಳ ಮೇಲೆ ಏನು ದಾಳಿ ನಡೆದಿದೆ. ದಿಢೀರಾಗಿ ಮಂಗಳೂರಿನಲ್ಲಿ, ದಾವಣಗೆರೆಯಲ್ಲಿ ಹಲವಾರು ಕಡೆಗಳಲ್ಲಿ ಹುಡುಕಿ ಹುಡುಕಿ ಹೋಗಿ ಚರ್ಚ್‌ಗಳ ಮೇಲೆ ದಾಳಿ ಮಾಡುತ್ತಿದ್ದಾರೆ. ಮೊನ್ನೆ ಒರಿಸ್ಸಾದಲ್ಲಿ ಏನು ಘಟನೆ ನಡೆಯಿತು ಎಂದರೆ, ಸುಪ್ರೀಂ ಕೋರ್ಟ್‌ನವರು ಒಂದು observation ಮಾಡಿದ್ದಾರೆ. ನೀವು ಈ ಮೈನಾರಿಟೀಸ್ ಕ್ರಿಶ್ಚಿಯನ್ಸ್‌ಗೆ ಪ್ರೊಟೆಕ್ಷನ್ ಕೊಡುವುದಕ್ಕಾಗಿಲ್ಲವೆಂದರೆ, ಜಾಗ ಖಾಲಿ ಮಾಡಿ ಎಂದು ಸುಪ್ರೀಂ ಕೋರ್ಟ್‌ನವರು ಒಂದು observation ಮಾಡಿದ್ದಾರೆ. ಇನ್ನು ಮುಂದೆ ಚರ್ಚ್‌ಗಳ ಮೇಲೆ ದಾಳಿ ಮಾಡುವುದಾಗಲಿ, harass ಮಾಡುವುದಾಗಲಿ ಇದನ್ನು ನಿಲ್ಲಿಸಬೇಕು. ಬಿಜಾಪುರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೋಗುತ್ತಾರೆಂದು ಇಡೀ ರಾತ್ರಿಯೆಲ್ಲಾ flagsಗಳನ್ನು ಹಾಕುತ್ತಿದ್ದಾರೆ. ಧಿಡೀರ್ ಎಂದು flags ಹಾಕುತ್ತಿದ್ದ ಅದೇ ಹುಡುಗರು ಇನ್ನೊಂದು flag ಹಾಕಿ ಮುಂದಿನ ದಿನವೇ ಗಲಾಟೆ ಶುರುವಾಗುತ್ತದೆ. ಇವರದೇ procession. ಮೂರು ದಿನಗಳವರೆಗೆ procession ನಡೆಯುತ್ತದೆ. ಇವರೇ flag ಹಾಕುವುದು ಇವರೇ arrest ಮಾಡಿ ಎಂದು procession ಮಾಡುವುದು. ಆದ್ದರಿಂದ, ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇಂತಹ ಸಂಗತಿಗಳ ಬಗ್ಗೆ ನೀವು action ತೆಗೆದುಕೊಳ್ಳಲಿಲ್ಲವೆಂದರೆ, ಇನ್ನು ಮುಂದೆ, ಬಹಳ ಕಷ್ಟವಾಗುತ್ತದೆ. ಈಗ ಬಾಗಲ್‌ಕೋಟ್ ಪೊಲೀಸ್‌ನವರು ಏನು ಅರೆಸ್ಟ್ ಮಾಡಿದ್ದಾರೆ, ಶ್ರೀ ನಾಗರಾಜ್ ಜಂಬಗಿ ಅವರೆಲ್ಲಾ ಯಾರು, ಯಾವ organisationನವರು? ಕೆಲವು ಪೊಲೀಸ್ ಅಧಿಕಾರಿಗಳು ಅವರನ್ನು ಕ್ರಿಮಿನಲ್ಸ್ ಎಂದು twist ಕೊಡುತ್ತಿದ್ದಾರೆ. ಇದೇ ಗ್ರೂಪ್ ಮರುಮುಲ್ಲಾದಲ್ಲಿ

ಗಲಾಟೆ ಮಾಡಿದ್ದರು. ಚಿಂತಾಮಣಿ ತಾಲ್ಲೂಕು, ಕೋಲಾರ್ ಡಿಸ್ಟ್ರಿಕ್ ಹೀಗೆ ಹಲವಾರು ಕಡೆ ಈ ಜನ ಗಲಾಟೆ ಮಾಡಿದ್ದಾರೆ. ಆಮೇಲೆ ಪ್ರವೀಣ್ ಮುತ್ತಾಲಿಕ್ ಅಂದರೆ ಯಾರು ಇವನು? 40 ಲಕ್ಷ ರೂಪಾಯಿಗಳು ಹೇಗೆ ಹೋಯಿತು? ಗಾಳಿಯಲ್ಲಿ ಹೋಯಿತೇ? 40 ಲಕ್ಷ ರೂಪಾಯಿಗಳನ್ನು ಇಲ್ಲಿಂದ ಯಾರಾದರೂ ಎತ್ತುಕೊಂಡು ಹೋದರಾ? ಮಾಲೆಗಾವ್ ಬ್ಲಾಸ್ಟ್‌ನಲ್ಲಿ ಯಾರು involve ಆಗಿದ್ದರು. ಅವರಿಗೆ 40 ಲಕ್ಷ ರೂಪಾಯಿಗಳು ಹೇಗೆ ಹೋಗುತ್ತೆ? ಮಾನ್ಯ ಸಭಾಧ್ಯಕ್ಷರೆ, ಈ ವಿಷಯದ ಬಗ್ಗೆ ಸರ್ಕಾರ ಬಹಳ ವಿಫಲವಾಗಿದೆ. ಮಾನ್ಯ ಸಭಾಧ್ಯಕ್ಷರೆ, ಇದೇ ಸಂದರ್ಭದಲ್ಲಿ ಸನ್ಮಾನ್ಯ ಯಡಿಯೂರಪ್ಪನವರು, ಮಾನ್ಯ ಸುರೇಶ್ ಕುಮಾರ್‌ರವರು ಮೊದಲು ವಿರೋಧ ಪಕ್ಷದಲ್ಲಿದ್ದಾಗ law and order ಬಗ್ಗೆ ಏನೇನು ಮಾತನಾಡಿದ್ದಾರೆ ಎಂದು ಸ್ವಲ್ಪ ಪುಸ್ತಕ ತೆಗೆದು ನೋಡಿ. ಈಗ 6 ತಿಂಗಳ ಹಿಂದೆ ಏನೇನು ಮಾತನಾಡಿದ್ದೀರಿ ಎಂದು ರೆಕಾರ್ಡ್‌ನಲ್ಲಿ ತಾವು ನೋಡಬಹುದು. ಹೊಸದಾಗಿ ಸರ್ಕಾರ ಆಗಿದೆ. ಏನಪ್ಪಾ ಒಂದು ಅಥವಾ ಎರಡು ತಿಂಗಳಾಗಿದೆ ಎಂದು ನಾವು ಕಾದು ನೋಡಿದರೆ, ಇನ್ನೂ ಹನಿಮೂನ್ ಪೀರಿಯಡ್, ಇನ್ನು ಸ್ವಲ್ಪ felicitation functionನಲ್ಲಿ ಬ್ಯುಸಿಯಾಗಿದ್ದಾರೆ. ಇನ್ನೊಂದೆರಡು ತಿಂಗಳುಗಳಲ್ಲಿ settle ಆಗುತ್ತಾರೆಂದರೆ, ಇನ್ನು ಯಾವಾಗ ಇವರು settle ಆಗುವುದು? ಬರೀ transfers ಮಾಡಿಕೊಂಡೇ ಇರುತ್ತಾರಾ? ಮಾನ್ಯ ಸಭಾಧ್ಯಕ್ಷರೆ, ಇದೇ ರೀತಿ ಇನ್ನೂ ಘಟನೆಗಳು ಜಾಸ್ತಿಯಾಗುತ್ತದೆ. ನಾನು ಮನವಿ ಮಾಡಿಕೊಳ್ಳವುದೇನೆಂದರೆ, ಸರ್ಕಾರದಲ್ಲಿ D.G Office ನಲ್ಲಿ funds ಬಗ್ಗೆ ಏನು ಗೋಲ್‌ಮಾಲ್ ಆಗುತ್ತಿದೆ ಎನ್ನುವುದನ್ನು ನೋಡಬೇಕು. Telecommunication, ಇದಕ್ಕೆಲ್ಲಾ ಎಷ್ಟು ದುಡ್ಡು ಖರ್ಚಾಗಿದೆ, ಯಾವ್ಯಾವುದಕ್ಕೆ ಎಷ್ಟು ದುಡ್ಡು ಖರ್ಚು ಮಾಡಿದ್ದೀರಿ? ಎಲ್ಲೆಲ್ಲಿ ನಿಮ್ಮ intelligence failure ಆಗಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಈ intelligences forces ಏನು ಇದೆ ಅವರಿಗೆ ದಯವಿಟ್ಟು revamp ಮಾಡಿ. For god sake ದಯವಿಟ್ಟು revamp ಮಾಡಿ. Sub-Inspector ಅನ್ನು select ಮಾಡುವಾಗ ಯಾರಿಗೆ ಚೆನ್ನಾಗಿ aptitude ಇರುತ್ತದೆ ಅಂತಹವರನ್ನು Intelligence Office ಗೆ ಹಾಕಿ. ಒಂದು ಸಲ Sub-Inspector ಆಗಿ select ಆದಮೇಲೆ ರಿಟೈರ್ಡ್ ಆಗುವವರೆಗೆ Intelligence Officeನಲ್ಲಿ ಇರುತ್ತೇನೆಂದು ಅವರಿಗೆ ಗೊತ್ತಾಗಬೇಕು. Sub-Inspector ಆಗಿ select ಮಾಡಿ ದಿಢೀರ್

ಎಂದು ಅವರಿಗೆ traffic ನಂತರ traffic ನಿಂದ, Law and order ಹೀಗೆ transfer ಮಾಡುವ ಬದಲು ಒಂದು ಸಲ ಗುಪ್ತದಳಕ್ಕೆ ಹಾಕಿದ ಮೇಲೆ ಅವರಿಗೆ ಅದು punishment posting ಆಗುತ್ತದೆ. ಮಾನ್ಯ ಸಭಾಧ್ಯಕ್ಷರೆ, this mental attitude of punishment postings, intelligence agencyಗೆ ಹೋದರೆ ಅದು ತಲೆಯಿಂದ ಹೋಗಬೇಕು. ಸರ್ಕಾರ ಈ intelligence network ಬಗ್ಗೆ ಯೋಚನೆ ಮಾಡಬೇಕು. Intelligence network ನಲ್ಲಿ ನೀವು fail ಆಗಿದ್ದೀರಿ. I.B. ಜೊತೆಗೆ RAWನಲ್ಲಿ ಕೂಡ ನಿಮ್ಮ ಆಫಿಸರ್ಸ್ ಏನು ಇದ್ದಾರೆ ಅವರು day to day business network ಸರಿಯಾಗಿ ಇಲ್ಲ. ಸೇನಾ members ಯಾರ್ಯಾರು arrest ಆಗಿದ್ದಾರೆ, ಹಿಂದುಗಳು ಯಾರಿದ್ದಾರೆ ಅವರನ್ನು ಏನಾದರೂ ಹತೋಟಿಗೆ ತಂದಿಲ್ಲವೆಂದರೆ ಹಾಗೂ ಕರಾವಳಿ ಪ್ರದೇಶದಲ್ಲಿ ಇವರು ಏನೇನು ನಾಟಕ ಮಾಡುತ್ತಿದ್ದಾರೆ, ಮೈಸೂರಿನಲ್ಲಿ ಏನೇನು ನಾಟಕ ಮಾಡುತ್ತಿದ್ದಾರೆ, ಮೊನ್ನೆ ಕೆ.ಆರ್.ನಗರದಲ್ಲಿ, ಪಾಂಡವಪುರದಲ್ಲಿ ಬಸ್‌ಸ್ಟಾಂಡ್‌ನಲ್ಲಿ ಹೋಗುತ್ತಿರುವವರನ್ನು ಹಿಡಿದುಕೊಂಡು ಹೋಗಿ, ಯಾರು ಟೋಪಿ ಹಾಕಿಕೊಂಡಿರುತ್ತಾರೆ ಹಾಗೂ ಯಾರು ದಾಡಿಯನ್ನು ಬಿಟ್ಟುಕೊಂಡಿರುತ್ತಾರೆ ಅವರನ್ನು terrorist ಎಂದು ಹಿಡಿದುಕೊಂಡು ಹೋಗಿದ್ದಾರೆ. ಈ ರೀತಿ ಅವರಿಗೆ ill-treat ಮಾಡುವುದು ಸರಿಯಲ್ಲ. ಇದರ ಬಗ್ಗೆ ಸರ್ಕಾರ ವಿಫಲವಾಗಿದೆ ಎಂದು ನಾನು ಹೇಳುತ್ತೇನೆ.

ಯಾರು ಟೋಪಿ ಹಾಕಿಕೊಂಡಿರುತ್ತಾನೆ, ಯಾರು ದಾಡಿ ಬಿಟ್ಟುಕೊಂಡಿರುತ್ತಾನೆ ಅವನ್ನೊಬ್ಬ terrorist ಎಂದು ಹಿಡಿದುಕೊಂಡು ಎಲ್ಲರ ಎದುರಿಗೆ ಕರೆದುಕೊಂಡು ಹೋಗುವುದು ಅವನನ್ನು ill-treat ಮಾಡುವುದು ಸರಿಯಲ್ಲ. ಇದರ ಬಗ್ಗೆ ಸರ್ಕಾರ ಬಹಳ ವಿಫಲವಾಗಿದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮುಂದೆ ಬಹಳ ಹುಷಾರಾಗಿ ನೋಡಿಕೊಳ್ಳಬೇಕು. ಒಂದು ಕೋಮಿನವರಿಗೆ ನೀವು ಈ ತರಹ ಮಾಡುತ್ತೀರಿ, ಆ ತರಹ ಮಾಡುತ್ತೀರೆಂದು ಹೇಳಿದರೆ ನಾಳೆ ಅವರು reiterate ಮಾಡುತ್ತಾರೆ. ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಯಾರಾದರೂ ಪಾಕಿಸ್ತಾನ ಕಡೆಯವರಿದ್ದರೆ ಅವರನ್ನು ಹಿಡಿದು ಕೊಂದು ಹಾಕಿ ಬಿಡಿ, hang ಮಾಡಿ, shoot ಮಾಡಿ. ನಾವು ಯಾರಿಗೆ ಆಗಲಿ support ಮಾಡುವುದಿಲ್ಲ. ನಾವು terrorism ನಿರ್ಮೂಲನೆಯ ಬಗ್ಗೆ

ಸರ್ಕಾರದ ಜೊತೆಗಿದ್ದೇವೆ. ವಿರೋಧ ಪಕ್ಷದವರಾದ ನಾವು terrorism ಬಗ್ಗೆ ನೀವು ಮನಸ್ಸು ಮಾಡಿ, ನಾವು ಸುಮ್ಮನೆ ನೋಡಿಕೊಂಡು ಇರುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಒಂದು ಜವಾಬ್ದಾರಿಯಿಂದ ವಿರೋಧ ಪಕ್ಷದಲ್ಲಿದ್ದಾಗ ನಿಮಗೆ ಸಹಕಾರ ಕೊಡಬೇಕು. Terrorism fight ಮಾಡುವುದಕ್ಕೆ ನಾವು ನಿಮಗೆ ಪೂರ್ತಿ ಸಹಕಾರ ಕೊಡುತ್ತೇವೆ. ಆದರೆ, ಯಾವುದು ಸೇನಾ group ಎಂದು ಹೊಸದಾಗಿ ಹುಟ್ಟಿಕೊಂಡಿದೆ, ಇಡೀ ರಾಜ್ಯದಲ್ಲಿ ಇವರು ಏನು ನಾಟಕ ನಡೆಸುತ್ತಿದ್ದಾರೆ ಅವರನ್ನು ಹತೋಟಿಗೆ ತೆಗೆದುಕೊಂಡು ಬರದಿದ್ದರೆ ಬಹಳ ಕಷ್ಟವಾಗುತ್ತದೆ. ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ) :- ಮಾನ್ಯ ಅಧ್ಯಕ್ಷರೆ, ತಾವು law and order problem ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ನಮ್ಮ ಕಾನೂನಿನ ಸುವ್ಯವಸ್ಥೆ ಬಹಳಷ್ಟು ಹದಗೆಟ್ಟಿದೆ ಸರ್ಕಾರ ನಡೆಸುವಂತಹ ಪರಿಸ್ಥಿತಿಯಲ್ಲಿಯೇ ಇಲ್ಲ ಎನ್ನುವ ರೀತಿಯಲ್ಲಿ ನಮ್ಮ ವಿರೋಧಪಕ್ಷದ ಉಪನಾಯಕರು ಮಂಡನೆಯನ್ನು ಬಹಳ ಚೆನ್ನಾಗಿ ಮಾಡಿದರು. ಅದನ್ನು ನಾವು appreciate ಮಾಡಬೇಕಾಗುತ್ತದೆ. ಮಂಡನೆ ಮಾಡಿದಂತಹ ರೀತಿ ಈ ಸರ್ಕಾರವೇ ಕಳಚಿ ಹೋಯಿತು, ಈ ಸರ್ಕಾರವೇ ಬಿದ್ದುಹೋಯಿತು ಎನ್ನುವ ರೀತಿಯಲ್ಲಿ ಮಂಡನೆ ಮಾಡಿದ್ದಾರೆ. ಆದರೆ, ಸನ್ಮಾನ್ಯ ಉಪನಾಯಕರು ಸ್ವಲ್ಪ ಹಿಂದಕ್ಕೆ ತಿರುಗಿ ನೋಡಬೇಕು. ಏಕೆಂದರೆ, ತಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ನಾಗಪ್ಪನವರನ್ನು ವೀರಪ್ಪನ್ ಹಿಡಿದುಕೊಂಡು ಹೋಗಿ ಹತ್ಯೆ ಮಾಡಿದನು. ಆಗ ತಾವು ಏನು ಮಾಡುತ್ತಿದ್ದೀರಿ? ಅದರ ಜೊತೆ ಈ ದೇಶದ ಪ್ರಧಾನಿಯಾಗಿದ್ದಂತಹ ಶ್ರೀಮತಿ ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದುಕೊಂಡೇ ಅವರನ್ನು ರಕ್ಷಣೆ ಮಾಡಲು ಸಾಧ್ಯವಾಗಲಿಲ್ಲ. ಆಗ ಪರಿಸ್ಥಿತಿ ಏನಾಗಿತ್ತು? ರಾಜೀವ್ ಗಾಂಧಿ ಅವರು ಪ್ರಧಾನ ಮಂತ್ರಿಯಾಗಿದ್ದರು. ಅವರ ಹತ್ಯೆಯೂ ಸಹ ಆಯಿತು. ಆಗಲೂ ಸಹ ನಿಮ್ಮ ನಾಯಕರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ನಿಮ್ಮದೇ ಪಕ್ಷದವರಾಗಿದ್ದ ವಸಂತ ಅಸ್ನೋಟಿಕರ್ ಅವರ ಕೊಲೆಯಾಯಿತು. ಆಗ ಯಾವ ಸರ್ಕಾರವಿತ್ತು ಸ್ವಾಮಿ? ಡಾ॥ ಚಿತ್ತರಂಜನ್ ಅವರ murder ಆಯಿತು. ಆ ಸಂದರ್ಭದಲ್ಲಿ ಸರ್ಕಾರ ಯಾವುದು ಇತ್ತು? ಸರ್ಕಾರ ಇವತ್ತು ಶಾಸಕರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ತಾವು ಹೇಳುತ್ತಿದ್ದೀರಿ. ನಮ್ಮ ಸರ್ಕಾರದ ಈ ಎಂಟು ತಿಂಗಳ ಅವಧಿಯಲ್ಲಿ ಯಾವುದೇ

ರೀತಿಯ ಗೊಂದಲ, stamp ಹಗರಣಗಳು ಆಗಲಿಲ್ಲ. ಸನ್ಮಾನ್ಯ ರೋಷನ್ ಬೇಗ್ ಅವರು ಈಗ ಮಾತನಾಡಿದರು. ಈ ಕರ್ನಾಟಕದಲ್ಲಿ ಅಲ್ಲ, ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬುಡಮೇಲು ಮಾಡುವಂತಹ ಕೃತ್ಯ ನಡೆಯಿತು ಆಗ ನೀವು ಏನು ಮಾಡುತ್ತಿದ್ದೀರಿ? ಅವರನ್ನು ಬಂಧನ ಮಾಡುವುದಕ್ಕೆ ಅಷ್ಟು ಸಮಯ ಆಯಿತು? ಅದನ್ನು ಯೋಚನೆ ಮಾಡಿದ್ದೀರಾ? ನಾಗಪ್ಪನವರ ಹತ್ಯೆ ಆಯಿತು ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಇಬ್ಬರು ಶಾಸಕರ ಹತ್ಯೆಯಾಯಿತು. ವೀರಪ್ಪನ್ ಡಾ॥ ರಾಜ್ ಕುಮಾರ್‌ರವರನ್ನು ಹಿಡಿದುಕೊಂಡು ಹೋದ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಗೊಂದಲವಾಯಿತು. ಹಲವಾರು ಸರ್ಕಾರಿ ವಾಹನಗಳು, ಲಕ್ಷಾಂತರ ರೂಪಾಯಿ ನಷ್ಟವಾಯಿತು. ಆಗ ತಾವು ಏನು ಮಾಡುತ್ತಿದ್ದೀರಿ? ತಮಿಳುನಾಡು, ಕಾವೇರಿ ಹಗರಣವಾಯಿತು. ಆ ಸಂದರ್ಭದಲ್ಲಿ ಬೆಂಗಳೂರು, ಮಂಡ್ಯದಲ್ಲಿ ಬೀದಿ ಬೀದಿಗಳಲ್ಲಿ ಗಲಾಟೆಯಾಯಿತು. ಆಗ ತಾವು ಏನು ಮಾಡುತ್ತಿದ್ದೀರಿ? ತಾವು ಆಡಳಿತ ಪಕ್ಷದಲ್ಲಿದ್ದಾಗ ಏನೂ ಸಾಧಿಸುವುದಕ್ಕೆ ಸಾಧ್ಯವಾಗಲಿಲ್ಲ. ಈಗ ತಾವು ಎಂಟು ತಿಂಗಳಿನಿಂದ ವಿರೋಧಪಕ್ಷದಲ್ಲಿ ಕುಳಿತ ಕೂಡಲೇ ಸರ್ಕಾರದ ಮೇಲೆ ಬಾಣ ಬಿಡಲು ಶುರು ಮಾಡಿದ್ದೀರಿ. ತಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ಯಾವ ರೀತಿ ನಡೆದುಕೊಂಡಿದೆ? ಎಷ್ಟು ಶಾಸಕರು murder ಆದರು? ಎಷ್ಟು ಶಾಸಕರಿಗೆ ನೀವು ರಕ್ಷಣೆ ಕೊಟ್ಟಿದ್ದೀರಿ? Murder ಆಗಿರುವಂಥದ್ದನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಇದನ್ನು ತಾವು ಯೋಚನೆ ಮಾಡಬೇಕು. ಅದನ್ನು ಬಿಟ್ಟು ತಾವೇ ಒಂದು ರೀತಿಯಲ್ಲಿ ಕೊಳಚೆ ಗುಂಡಿಯಲ್ಲಿದ್ದುಕೊಂಡು ಕೆಸರನ್ನು ಎರಚುವಂತಹ ಕೆಲಸವನ್ನು ಮಾಡಬೇಡಿ. ನನಗೆ ಅಕ್ಬರ್ ಬೀರಬಲ್‌ನ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಬೀರಬಲ್ಲನನ್ನು ಯಾವುದಾದರೂ ಒಂದು ಸಂದರ್ಭದಲ್ಲಿ ಖಂಡನೆ ಮಾಡಬೇಕೆನ್ನುವ ಚಿಂತನೆಯಿಂದ ಬೀರಬಲ್ ಇದ್ದಂತಹ ಸಂದರ್ಭದಲ್ಲಿ ಅಕ್ಬರ್‌ನು ಬೀರಬಲ್ಲನಿಗೆ ನಾನು ಇವತ್ತು ಒಂದು ಕನಸನ್ನು ಕಂಡೆ ಎಂದು ಹೇಳಿದನಂತೆ, ಅದು ಏನು ಎಂದು ಬೀರಬಲ್ ಕೇಳಿದಾಗ, ನಾನು ಜೇನಿನ ಗುಂಡಿಯಲ್ಲಿದೆ, ನೀನು ಕೊಳಚೆ ಗುಂಡಿಯಲ್ಲಿದೆ ಎಂದು ಹೇಳಿದರಂತೆ. ಆಗ ಬೀರಬಲ್ ನಾನು ಇನ್ನು ಸ್ವಲ್ಪ ಒಳ್ಳೆಯ ಕನಸನ್ನು ಕಂಡೆ, ಅದನ್ನು ಹೇಳಿದರೆ ನೀವು ಸಿಟ್ಟು ಮಾಡಬಾರದು, ಅದೇನೆಂದರೆ ನೀವು ನನ್ನ ಮೈಯನ್ನು ನೆಕ್ಕುತ್ತಿದ್ದೀರಿ, ನಾನು ನಿಮ್ಮ ಮೈಯನ್ನು ನೆಕ್ಕುತ್ತಿದ್ದೆ. ಅಂದರೆ ನೀವು ಕೊಳಚೆಯನ್ನು ನೆಕ್ಕುತ್ತಿದ್ದಿರಿ ನಾನು ಜೇನನ್ನು ನೆಕ್ಕುತ್ತಿದ್ದೆ ಎನ್ನುವ ರೀತಿಯಲ್ಲಿ ಕನಸು ಬಿದ್ದಿತ್ತು ಎಂದು

ಬೀರಲ್ ಹೇಳಿದರು. ಆ ರೀತಿ ತಾವು ಇರುವುದೇ ಕೊಳಚೆ ಗುಂಡಿಯಲ್ಲಿ, ತಾವು ಸರ್ಕಾರ ನಡೆಸಿದಂತಹ ಸಂದರ್ಭದಲ್ಲಿ law and order ಇರಲಿಲ್ಲ. ಬೀದಿ ಬೀದಿಯಲ್ಲಿ ಕಾಳಗಗಳು, ದರೋಡೆಗಳು ನಡೆಯುತ್ತಿದ್ದವು. ಆದರೆ, ಇವತ್ತು ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ ಸನ್ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಜನರು, ರೈತರು, ಬಡವರು, ಕೂಲಿಕಾರ್ಮಿಕರು, ಎಲ್ಲರೂ ಕೂಡ ನೆಮ್ಮದಿಯಿಂದ ಇರುವಂಥ ಸ್ಥಿತಿ ನಿರ್ಮಾಣವಾಗಿದೆ. ಅಷ್ಟೇ ಅಲ್ಲ ಹೊರದೇಶದವರು ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ನೋಡಿ, ಅವರು ಆಡಳಿತ ನಡೆಸಿದಂತಹ ರೀತಿಯನ್ನು ನೋಡಿ ಡಾಕ್ಟರೇಟ್ ಪದವಿಯನ್ನು ಕೊಟ್ಟಿದ್ದಾರೆ. ಅದನ್ನು ನಾವುಗಳು ಮೆಚ್ಚಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ನಾಯಕರು ಇವತ್ತು ಇಡೀ ಕರ್ನಾಟಕದ ಜನತೆಯನ್ನು, ರೈತರನ್ನು ಶಾಂತ ರೀತಿಯಿಂದ ನಡೆಸಿಕೊಂಡು ಹೋಗುವ ರೀತಿಯಲ್ಲಿ ಸಹಕಾರವನ್ನು ಕೊಟ್ಟಿದ್ದೇವೆ. ಕರ್ನಾಟಕ ಇನ್ನು ಕೂಡ ಸಮೃದ್ಧಿಯ ಶಿಖರಕ್ಕೆ ಹೋಗುತ್ತದೆ. ತಾವುಗಳೂ ಕೂಡ ತಾವು ತಪ್ಪು ಮಾಡಿರುವುದನ್ನು ಮುಚ್ಚಿ ಇನ್ನೊಬ್ಬರು ಮಾಡಿದ ತಪ್ಪನ್ನು ದೊಡ್ಡದಾಗಿ ಹೇಳುವುದನ್ನು ಬಿಡಬೇಕು ಎನ್ನುವ ವಿಚಾರವನ್ನು ಹೇಳುತ್ತಾ, ನನಗೆ ಸಮಯ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಟಿ.ಬಿ. ಜಯಚಂದ್ರ :- ಕರಾವಳಿ ವಾರಪತ್ರಿಕೆಯ ಸಂಪಾದಕ ಟಿ.ಎನ್.ಸೀತಾರಾಂ ಅವರನ್ನು handcup ಹಾಕಿ ಎಳೆದುಕೊಂಡು ಹೋದರಲ್ಲಾ, ಅದು ತಮಗೆ ಕ್ಷೋಭೆ ತರುತ್ತದೆಯೇ? ಯಾವ ಕಾರಣಕ್ಕೋಸ್ಕರ ಆ ಕೆಲಸ ಮಾಡಿದಿರಿ ಎನ್ನುವುದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು. ಮಾನ್ಯ ಅಪ್ಪಚ್ಚು ರಂಜನ್ ಅವರು ಭಯೋತ್ಪಾದನೆ ಬಗ್ಗೆ ಹೇಳಿದರು. ಭಯೋತ್ಪಾದನೆ ಎನ್ನುವುದು ಕೇವಲ ಯಾವುದೇ ಒಂದು ಪಕ್ಷದ ಸಮಸ್ಯೆಯಲ್ಲ. ಅದು ಇಡೀ ದೇಶದ ಸಮಸ್ಯೆ. ಆ ಸಮಸ್ಯೆಯನ್ನು ಎದುರಿಸಬೇಕಾದಾಗ ಎಲ್ಲಾ ಪಕ್ಷದವರು, ಎಲ್ಲಾ ಸರ್ಕಾರದವರು ಕೂಡ ಇವತ್ತು ಜೊತೆಯಾಗಬೇಕಾಗುತ್ತದೆ. ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂದಿರಾಗಾಂಧಿ, ರಾಜೀವ್ ಗಾಂಧಿಯವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಆದರೆ, ಅದರ ಜೊತೆಗೆ ಮಹಾತ್ಮಾಗಾಂಧಿಜಿಯವರನ್ನೂ ಕಳೆದುಕೊಂಡಿದ್ದೇವೆ. ಆ ಬಲಿದಾನಕ್ಕೆ ಭಯೋತ್ಪಾದನೆ ಎಲ್ಲಿ ಮೂಲಭೂತ ವಾದವಿರುತ್ತದೆಯೋ ಅದು ಹಿಂದುಗಳಾಗಿರಲಿ, ಮುಸ್ಲೀಮರಾಗಿರಲಿ ಯಾರೇ ಆಗಲಿ ಈ fundamentalist ಅನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳದಿದ್ದರೆ ಇದೆಲ್ಲಾ

ಅನಿವಾರ್ಯ ಎಂದು ಹೇಳಬಯಸುತ್ತೇನೆ. ಇಡೀ ಪ್ರಪಂಚ ಇವತ್ತು ನಮ್ಮ ಜೊತೆಗಿದೆ. ಎಲ್ಲರೂ ಸೇರಿ ಭಯೋತ್ಪಾದನೆಯನ್ನು ತೆಗೆದು ಹಾಕಲು ಪ್ರಯತ್ನಪಡಬೇಕು. ಅದನ್ನು ಬಿಟ್ಟು ಮಕ್ಕಳ ಹತ್ತಿರ ಹೋಗಿ ಪಾಠ ಮಾಡುವುದು ಬಿಟ್ಟುಬಿಟ್ಟು ಭಯೋತ್ಪಾದನೆಯನ್ನು ತೆಗೆದು ಹಾಕುವುದಕ್ಕೆ ಈ ಕೆಲಸ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ ಹೋದರಿ ಪ್ರಯೋಜನವಾಗುವುದಿಲ್ಲ. ತಮ್ಮ ಎಂಟು ತಿಂಗಳ ಅಧಿಕಾರಾವಧಿಯಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. I am making the Government responsible for all the omissions and commissions. They should bear the responsibility. ಅವರು ಜವಾಬ್ದಾರಿಕೆಯನ್ನು ಹೊತ್ತುಕೊಂಡು ಯಾವ ರೀತಿಯಾಗಿ ಆ ತಪ್ಪುಗಳಿಂದ ಹೊರಬರಬಹುದು, ಯಾವ ರೀತಿಯಾಗಿ ಸರಿಪಡಿಸಿಕೊಳ್ಳಬಹುದು ಎನ್ನುವ ಅವಕಾಶ ಅವರಿಗಿದೆ. ಅದನ್ನು ಮಾಡಬೇಕೆಂದು ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಜುಗೌಡ ನರಸಿಂಹ ನಾಯಕ್ :- ಒಂದು ಮಾತು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಮಹಾತ್ಮ ಗಾಂಧೀಜಿಯವರ ಬಗ್ಗೆ ನಮಗೆ ಸಾಕಷ್ಟು ಅಭಿಮಾನವಿದೆ. ಅವರು ಕಾಂಗ್ರೆಸ್ ಪಕ್ಷವನ್ನು ಕಟ್ಟಿದವರು ಮತ್ತು ಸ್ವಾತಂತ್ರ್ಯ ಹೋರಾಟ ಮಾಡಿದವರು ಎಂಬುದು ಗೊತ್ತಿದೆ. ಆದರೆ, ಯುವಕರಿಗೆ ಇದರ ಬಗ್ಗೆ ತಾವು ತಿಳಿಸಿ ಹೇಳಬೇಕು. ಸ್ವಾತಂತ್ರ್ಯ ಸಿಕ್ಕಿದ ಬಳಿಕ ಗಾಂಧೀಜಿಯವರು ಏನು ಹೇಳಿದರು? ಈ ಪಕ್ಷವನ್ನು ರಾಜಕೀಯ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಬಾರದೆಂದರು. ಆ ಮಾತನ್ನು ತಾವು ಸ್ವಲ್ಪ ನೆನಪಿಸಿಕೊಳ್ಳಿ. ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕೆಂದು ಹೇಳಿದರು. ಅದು ಬಿಟ್ಟು ರಾಜಕೀಯಕ್ಕೋಸ್ಕರ, ರಾಜಕೀಯ ಲಾಭ ಪಡೆದುಕೊಳ್ಳುವುದಕ್ಕೋಸ್ಕರ ಆ ಪಕ್ಷವನ್ನು ಮುಂದುವರೆಸಿಕೊಂಡು ಇವತ್ತು ಮಾತು ಮಾತಿಗೂ ಮಹಾತ್ಮ ಗಾಂಧೀಜಿಯವರ ಹೆಸರನ್ನು ಹೇಳಿಕೊಂಡು ಹೊರಟಿದ್ದೀರಿ. ಅವರ ಬಗ್ಗೆ ನಮಗೆ ಗೌರವವಿದೆ. ಗೌರವದಿಂದಲೇ ಅವರ ಹೆಸರನ್ನು ಉಪಯೋಗಿಸಿ ಕೊಳ್ಳುವುದು ಒಳ್ಳೆಯದು. ಬದಲಾಗಿ ರಾಜಕೀಯ ಲಾಭಕ್ಕೆ ಉಪಯೋಗಿಸಿಕೊಳ್ಳಬಾರದೆಂದು ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಸುರೇಶ್‌ಬಾಬು ತಂದೆಯವರ ಕೊಲೆಯಾದಾಗ ತಾವು ಅಧಿಕಾರದಲ್ಲಿದ್ದಿರಿ ಎಂಬುದನ್ನು ನೆನಪಿಸಿಕೊಳ್ಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಯು.ಟಿ. ಖಾದರ್ :- ಈ ಸರ್ಕಾರ ಬಂದಾಗ ಕರಾವಳಿ ಜಿಲ್ಲೆಯವರೊಬ್ಬರು ಗೃಹ ಮಂತ್ರಿಗಳಾಗಿ ಆಯ್ಕೆಯಾಗಿದ್ದು ಬಹಳ ಸಂತೋಷದ ಸಂಗತಿಯಾಗಿತ್ತು. ಆದರೆ, ಈಗ ಆ ಪ್ರದೇಶದ ಜನರು ಮತ್ತು ಆ ಭಾಗದ ಪ್ರತಿನಿಧಿಯಾಗಿರುವ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ. ಅಲ್ಲಿನ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಪ್ರವಾಸ ಹೊರಡುವುದಿಲ್ಲ. ಪ್ರವಾಸ ಹೊರಟರೆ ಸಮಾಜಘಾತುಕ ಶಕ್ತಿಗಳು ಬಂದು ಬಸ್ಸನ್ನು ಲೂಟಿ ಮಾಡುತ್ತಾರೆ ಮತ್ತು 2-3 ಕೊಲೆಗಳು ಸಹ ನಡೆದಿವೆ. ಇದರ ಬಗ್ಗೆ ಕರಾವಳಿ ಪತ್ರಿಕೆಯ ಸಂಪಾದಕರು ತಮ್ಮ ಪತ್ರಿಕೆಯಲ್ಲಿ ಬರೆದಾಗ ಪತ್ರಿಕೆಯ ಸಂಪಾದಕರಾದ ಸೀತಾರಾಂ ಎಂಬುವವರನ್ನು ಬಂಧಿಸಿ, ಅವರ ಕೈಗಳಿಗೆ ಕೋಳ ತೊಡಿಸಿದ್ದಾರೆ. ಅವರನ್ನು ಮೈಸೂರಿನಲ್ಲಿಟ್ಟಿದ್ದಾರೆ. ಅವರ ಮೇಲೆ ಇವತ್ತು ಬೇರೆ ಬೇರೆ ತರಹದ ಕೇಸ್‌ಗಳನ್ನು ದಾಖಲಿಸಿದ್ದಾರೆ. ಆದುದರಿಂದ, ಇಂತಹ ದಬ್ಬಾಳಿಕೆ ನಿಲ್ಲಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ನಮ್ಮ ಪ್ರತಿ ಪಕ್ಷದ ಉಪ ನಾಯಕರಾದ ಶ್ರೀ ಜಯಚಂದ್ರರವರು ಹಾಗೂ ಇತರ ಅನೇಕ ಮಾನ್ಯ ಸದಸ್ಯರು ನಿಲುವಳಿ ಸೂಚನೆ ಮೂಲಕ ಕಳೆದ ಎಂಟು ತಿಂಗಳುಗಳ ಅವಧಿಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಮತ್ತು ಇನ್ನು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದಾಗ ತಾವು ನಿಯಮ 69ರಡಿಯಲ್ಲಿ ಸುದೀರ್ಘ ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದರಿಂದ ಅನೇಕ ಹಿರಿಯ ಸದಸ್ಯರು ಅನೇಕ ವಿಚಾರಗಳಲ್ಲಿ ಬೆಳಕು ಚೆಲ್ಲಿದ್ದಾರೆ. ಬಹುಶ:, ಒಂದು ಮಾತನ್ನು ಹೇಳಬಯಸುತ್ತೇನೆ. ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ನಾವು ಪ್ರಥಮ ಆದ್ಯತೆ ಕೊಡುವುದಕ್ಕೆ ಯಾವ್ಯಾವ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಮುಂದೆ ಹೇಳುವವರಿದ್ದೇವೆ. ಆದರೆ, ಇವತ್ತು ನಮ್ಮ ಸ್ನೇಹಿತರು ಈ ದೇಶವನ್ನು ಕಾಡುತ್ತಿರುವ, ಈ ನಾಡನ್ನು ಕಾಡುತ್ತಿರುವ ಭಯೋತ್ಪಾದನೆ ಬಗ್ಗೆ ಬೆಳಕು ಚೆಲ್ಲುತ್ತಾರೆ.

ಇಡೀ ದೇಶ ಮುಂಬಯಿ ಘಟನೆ ಹಿನ್ನೆಲೆಯಲ್ಲಿ ತಲ್ಲಣಗೊಂಡಾಗ ಅದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿ ನಾವು ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಚರ್ಚೆಯಾಗುತ್ತದೆಂದು ಭಾವಿಸಿದ್ದೇನೆ. ಬಹುಶ:, ಭಯೋತ್ಪಾದನೆ ಮತ್ತು ಅದರ ಪರಿಣಾಮದಿಂದ ನಮ್ಮ ರಾಷ್ಟ್ರದಲ್ಲಿ ಮೂರು ದಶಕಗಳಿಂದ ಸುಮಾರು 83,000 ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡಿದೆ.

ಕೇಂದ್ರ ಸರ್ಕಾರದ ಧೋರಣೆಯೊಂದಿಗೆ ನಮ್ಮ ದೇಶದಲ್ಲಿ ಭಯೋತ್ಪಾದನೆಯನ್ನು ಹತ್ತಿಕ್ಕುವುದಕ್ಕೆ, ನಿರ್ಮೂಲನೆಗೊಳಿಸುವುದಕ್ಕೆ ಸಾಧ್ಯವಾಗಿಲ್ಲವೆಂದು ರಕ್ಷಣಾ ತಜ್ಞರ ಅಭಿಪ್ರಾಯವಾಗಿದೆ. ಈ ಬಗ್ಗೆ ಸ್ವತ: ಪ್ರಧಾನಿಯವರೇ ಆಸಕ್ತಿ ವಹಿಸಿ ಮೊದಲ ಬಾರಿಗೆ ಈ ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ರಾಜ್ಯಗಳಲ್ಲಿ ಭಯೋತ್ಪಾದನೆಯನ್ನು ಹತ್ತಿಕ್ಕಲು ಏನೇನು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಿದ್ದು ತಮಗೆಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ.

ಇಡೀ ಜಗತ್ತಿನಲ್ಲಿ ಮತ್ತು ನಮ್ಮ ದೇಶದಲ್ಲಿ ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚುತ್ತಿದ್ದು, ಇತ್ತೀಚಿನ ಮುಂಬಯಿ ಘಟನೆ ನಮ್ಮ ರಾಷ್ಟ್ರವನ್ನೇ ತಲ್ಲಣಗೊಳಿಸಿದೆ. ಮುಂಬಯಿ ಘಟನೆ ನಂತರ ಕೇಂದ್ರ ಸರ್ಕಾರದ ಗೃಹ ಮಂತ್ರಿಯವರನ್ನು ಬದಲಾಯಿಸಲಾಗಿದೆ. ಆದರೆ, ಆ ರೀತಿ ಬದಲಾವಣೆ ಮಾಡಿದ ನಂತರ ಭಯೋತ್ಪಾದನೆ ಒಂದು ಕ್ಯಾನ್ಸರ್ ಆಗಿ ದೇಶದ ಎಲ್ಲಾ ಕಡೆಗಳಲ್ಲೂ, ರಾಜ್ಯದೊಳಗೂ ಎಲ್ಲೆ ಮೀರಿ ಹರಡುತ್ತಿರುವುದು ತಮಗೆಲ್ಲರಿಗೂ ಗೊತ್ತಿರುವ ಸಂಗತಿ. ನನ್ನ ದೃಷ್ಟಿಯಲ್ಲಿ ಕೇಂದ್ರ ಸರ್ಕಾರದ ಒಬ್ಬ ಗೃಹ ಸಚಿವರನ್ನು ಮತ್ತು ರಾಜ್ಯದ ಯಾವುದೇ ಒಬ್ಬ ಗೃಹ ಸಚಿವರನ್ನು ಬದಲಾಯಿಸುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆಂದು ನಾನು ಭಾವಿಸಿಲ್ಲ. ಅದಕ್ಕೋಸ್ಕರ, ನಮಗೆ ಸರಿ ಕಂಡ ರೀತಿಯಲ್ಲಿ ಭಯೋತ್ಪಾದನೆ ವಿರುದ್ಧ ನಾಡಿನ ಜನರು ಒಟ್ಟಾಗಿ, ಒಂದಾಗಿ ನಿಲ್ಲಬೇಕೆಂದು ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ ಸಂದರ್ಭದಲ್ಲಿ ಈ ನಾಡಿನ ಯುವ ಪೀಳಿಗೆಯಲ್ಲಿ ಜಾಗೃತಿ ಮೂಡಿಸಿ, ಸಂಕಲ್ಪ ತೊಟ್ಟು, ನಿಮ್ಮೊಂದಿಗೆ ನಾವಿದ್ದೇವೆ, ಇದು ನಮ್ಮ ಆದ್ಯ ಕರ್ತವ್ಯ, ಈ ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಪ್ರೇರಣೆ ಕೊಡುವ ಕ್ರಾಂತಿಕಾರಿ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಬಹುಶ:, ಇಲ್ಲಿ ಮಾಡುತ್ತಿರುವ ಈ ಕಾರ್ಯಕ್ರಮದ ಪರಿಣಾಮ ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಲ್ಲೂ ಸಿಗುತ್ತಿರುವ ಸ್ವಾಗತ ಯುವಕರಲ್ಲಿ ಆ ಸಂಕಲ್ಪ ಮತ್ತು ಇದನ್ನು ಹತ್ತಿಕ್ಕುವುದಕ್ಕೆ ನಾವು ಕಟಿಬದ್ಧರಾಗಿದ್ದೇವೆ, ದೇಶ ಭಕ್ತಿಯ ಪ್ರಭಾವ ನಿಜಕ್ಕೂ ಸಹ ಸರ್ಕಾರಕ್ಕೆ ಸ್ಥೈರ್ಯ ಮೂಡಿಸಿದೆ.

ಶಾಲಾ-ಕಾಲೇಜುಗಳಲ್ಲಿ ಉಗ್ರಗಾಮಿಗಳು ಒಳ ಹೊಕ್ಕುತ್ತಿರುವ ಈ ಸಂದರ್ಭದಲ್ಲಿ ಯುವ ಪೀಳಿಗೆ ಮಾತ್ರ ಇದನ್ನು ಹತ್ತಿಕ್ಕುವುದಕ್ಕೆ ಸಾಧ್ಯವಿದೆ. ಬಹುಶ:, ಯೂನಿವರ್ಸಿಟಿಗಳಲ್ಲಿ, ವೈಸ್ ಚಾನ್ಸ್‌ಲರ್‌ಗಳ ಸಭೆ ಕರೆದು ಅವರ ಜೊತೆ ಮಾತನಾಡಿ, ಶಾಲಾ-ಕಾಲೇಜುಗಳಿಗೂ ಈ ರೀತಿ ಉಗ್ರಗಾಮಿಗಳು ನುಸುಳದಂತೆ ಕಟ್ಟೆಚ್ಚರ ವಹಿಸುವ

ಮೂಲಕ ಯುವಕರಲ್ಲಿ ಜಾಗೃತಿ ಮೂಡಿಸುವುದಕ್ಕೆ ವಿಶೇಷ ತರಬೇತಿ ಮತ್ತು ಆ ರೀತಿಯ ಪ್ರೇರಣೆ ಕೊಡುವ ಕಾರ್ಯಕ್ರಮ ಅಗತ್ಯವೆಂದು ಅವರಿಗೆ ಮನದಟ್ಟು ಮಾಡಬೇಕೆಂದು ನಾನು ನಿರ್ಧರಿಸಿದ್ದೇನೆ.

ನಮ್ಮ ರಾಜ್ಯದಲ್ಲೂ ಮೂರೂವರೆ ವರ್ಷಗಳ ಹಿಂದೆ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಾದ Indian Institute of Scienceನಲ್ಲಿ ಭಯೋತ್ಪಾದಕರು ದಾಳಿ ನಡೆಸಿ ಒಬ್ಬ ಪ್ರಸಿದ್ಧ ವಿಜ್ಞಾನಿಯ ಪ್ರಾಣ ತೆಗೆದರು ಎಂಬುದು ನಮಗೆಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಕಳೆದ ಜುಲೈ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಸರಣಿ ಬಾಂಬ್ ಸ್ಫೋಟ ನಡೆಯಿತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಭಯೋತ್ಪಾದನೆ ನಿಗ್ರಹಕ್ಕೆ ವಿಶೇಷ ಕ್ರಮಗಳನ್ನು ಕೈಗೊಂಡಿದೆ. ನಮ್ಮ ಶಾಸಕ ಬಂಧುಗಳಿಗೆ, ಸದನಕ್ಕೆ ಮತ್ತು ಈ ಮೂಲಕ ನಾಡಿನ ಜನರಿಗೆ ಹೇಳಬಯಸುವುದೇನೆಂದರೆ, ಎಲ್ಲಾ ಜಿಲ್ಲೆಗಳಲ್ಲೂ ದಿನದ 24 ಗಂಟೆಗಳ ಕಾಲ ವಾರದ ಏಳು ದಿವಸ(24X7)ಗಳಲ್ಲೂ ಪೊಲೀಸ್ ಕಂಟ್ರೋಲ್ ರೂಮ್‌ನ ಸ್ಥಾಪನೆ ಮತ್ತು toll free ದೂರವಾಣಿ ವ್ಯವಸ್ಥೆಯನ್ನು ನಾವು ಜಾರಿಗೊಳಿಸಿದ್ದೇವೆ. ರಾಜ್ಯ ಗುಪ್ತದಳ ಮತ್ತು ಭಯೋತ್ಪಾದನೆ ನಿಗ್ರಹ ದಳಗಳನ್ನು ಬಲಪಡಿಸುವುದಕ್ಕೆ ಕಾರ್ಯಕ್ರಮ ರೂಪಿಸಿದ್ದೇವೆ. ಗುಪ್ತದಳದ ಮಾಹಿತಿಯನ್ನು ಕೇಂದ್ರ ಸರ್ಕಾರ ಮತ್ತು ಇತರೆ ರಾಜ್ಯಗಳ ಅಧಿಕಾರಿಗಳೊಂದಿಗೆ ಹಂಚಿಕೊಳ್ಳುತ್ತಿದ್ದೇವೆ. ಅಣೆಕಟ್ಟು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಧಾರ್ಮಿಕ ಕ್ಷೇತ್ರಗಳು, ಇತ್ಯಾದಿ ಸೂಕ್ಷ್ಮ ಸ್ಥಳಗಳಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಿದ್ದೇವೆ. ಖಾಸಗಿ ಸಂಸ್ಥೆಗಳೊಂದಿಗೆ ಸಭೆ ನಡೆಸಿ ಅವರೂ ಸಹ ತಮ್ಮ ಕಂಪನಿಗಳ ಭದ್ರತಾ ವ್ಯವಸ್ಥೆ ಕಡೆ ವಿಶೇಷ ಗಮನ ಕೊಡಬೇಕೆನ್ನುವಂತಹ ಸೂಚನೆ ಮತ್ತು ಅವರೊಂದಿಗೆ ಸಮಾಲೋಚನೆಯನ್ನು ಎರಡು ಸಲ ಮಾಡಿದ್ದೇನೆ. ಪೊಲೀಸ್ ಇಲಾಖೆಗೆ ಹೆಚ್ಚಿನ ಹಣವನ್ನು ಒದಗಿಸಿದ್ದೇವೆ. ವಿಶೇಷವಾಗಿ, 25 ಕೋಟಿ ರೂ.ಗಳಷ್ಟು ಅನುದಾನವನ್ನು ಪೊಲೀಸ್ ಇಲಾಖೆಗೆ ಬೇಕಾಗುವ ಆಧುನಿಕ ಶಸ್ತ್ರಾಸ್ತ್ರ, ವಾಹನ, ಇತ್ಯಾದಿ ಉಪಕರಣಗಳನ್ನು ಕೊಳ್ಳುವುದಕ್ಕೆ ಹಣ ನೀಡಿದ್ದೇವೆ. ರಾಜ್ಯದ ಪೊಲೀಸರಿಗೆ ವಿಶೇಷ ತರಬೇತಿ ಕೊಡುತ್ತಿದ್ದೇವೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ.

ರಾಜ್ಯಗಳು ಎಷ್ಟೇ ಪ್ರಯತ್ನಿಸಿದರೂ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಕೇಂದ್ರ ಸರ್ಕಾರವು ಹೆಚ್ಚಿನ ಸಹಾಯ-ಸಹಕಾರ ನೀಡಬೇಕೆಂದು ನಾನು ನವದೆಹಲಿಗೆ ಹೋದಾಗ ಮುಖ್ಯಮಂತ್ರಿಗಳ ಸಭೆಯಲ್ಲಿ ಪ್ರಧಾನಮಂತ್ರಿಯವರಲ್ಲಿ ಮತ್ತು ಗೃಹ ಸಚಿವರಲ್ಲಿ ಪ್ರಾರ್ಥಿಸಿದ್ದೇನೆ. ಭಯೋತ್ಪಾದಕರು ಬಹಳ ದೊಡ್ಡ ಪ್ರಮಾಣದಲ್ಲಿ

ಅದರಲ್ಲೂ coastal areaದಲ್ಲಿ ನಮ್ಮ ದೇಶದ ಹೊರಗಡೆಯಿಂದ ಗಡಿಯೊಳಗೆ, ನಮ್ಮ ರಾಜ್ಯದೊಳಗೆ ನುಸುಳುತ್ತಿರುವ ಅನೇಕ ಮಾಹಿತಿಗಳು ನಮಗೆ ಲಭ್ಯವಾಗಿದೆ. ಮುಖ್ಯವಾಗಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಂದ ಕಾನೂನುಬಾಹಿರವಾಗಿ ವೀಸಾ ಇಲ್ಲದೆ ನಮ್ಮ ದೇಶದೊಳಗೆ ಪ್ರವೇಶಿಸಿ ಭಯೋತ್ಪಾದನಾ ಚಟುವಟುಕೆಗಳಲ್ಲಿ ತೊಡಗಿರುವುದರ ಬಗ್ಗೆ ಕೇಂದ್ರವೂ ಈ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಮುಂದಿನ ಟಾರ್ಗೆಟ್ ಬೆಂಗಳೂರು ಎಂಬ ಸೂಚನೆಗಳನ್ನು ಅವರು ನಮಗೆ ಕೊಟ್ಟಿದ್ದಾರೆ. ಮುಂಬಯಿ ಘಟನೆ ನಂತರ ನಾವು ರಾಜ್ಯದಲ್ಲಿ ಭಯೋತ್ಪಾದನಾ ಚಟುವಟುಕೆಗಳನ್ನು ಎದುರಿಸುವುದಕ್ಕೋಸ್ಕರ ಬೆಂಗಳೂರಿನಲ್ಲಿ ಎನ್.ಎಸ್.ಜಿ. ಘಟಕವೊಂದನ್ನು ಸ್ಥಾಪಿಸಬೇಕೆಂದು ಪ್ರಧಾನ ಮಂತ್ರಿಗಳಿಗೆ ಮೂರು ಬಾರಿ ಮತ್ತು ಗೃಹ ಸಚಿವರಿಗೆ ಮೂರು ಬಾರಿ ಪತ್ರಗಳನ್ನು ಬರೆದು, ಸ್ವತ: ನಾನೇ ಗೃಹ ಸಚಿವರನ್ನು ಭೇಟಿ ಮಾಡಿ ಮಾತನಾಡಿದ್ದೇನೆ.

ಗೃಹ ಸಚಿವರಿಗೆ ಮೂರು ಬಾರಿ ಪತ್ರ ಬರೆದಿದ್ದೇನೆ. ಸ್ವತ: ನಾನೇ ಗೃಹ ಸಚಿವರನ್ನು ಭೇಟಿ ಮಾಡಿ ಮಾತನಾಡಿದ್ದೆ. ಮನ್ಯ ಪ್ರಧಾನ ಮಂತ್ರಿಗಳನ್ನು ನಾನೇ ಸ್ವತ: ಭೇಟಿ ಮಾಡಿ ನಮ್ಮ ಬೇಡಿಕೆಯನ್ನು ಸಲ್ಲಿಸಿದ ನಂತರ 8-12-2008ರಂದು ಬೆಂಗಳೂರಿಗೆ ಒಂದು ಎನ್.ಎಸ್.ಜಿ. ಘಟಕವನ್ನು ಕೊಡುತ್ತೇನೆ ಎಂಬ ಆಶ್ವಾಸನೆಯನ್ನು ನೀಡಿದ್ದರು. ನಾನು ದೆಹಲಿಯಲ್ಲಿ ನಡೆದ ಮುಖ್ಯಮಂತಿಯವರ ಸಭೆಗಿಂತ ಮೊದಲು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಲು ಹೋಗಿದ್ದೆ. ತಾವು ಕೊಟ್ಟಂಥ ಭರವಸೆ ಈಡೇರಿಲ್ಲ, ಮುಂಬೈ, ಕೋಲ್ಕೊತ್ತಾ, ಚೆನ್ನೈ, ಹೈದ್ರಾಬಾದ್ ನಗರಗಳಿಗೆ ಯಾವ ರೀತಿಯಾಗಿ ಎನ್.ಎಸ್.ವೈ ಘಟಕವನ್ನು ಕೊಟ್ಟಿದ್ದೀರೋ ಅದೇ ರೀತಿ ಬೆಂಗಳೂರಿಗೂ ಕೊಡದಿರಲು ಕಾರಣವೇನು? ಬೆಂಗಳೂರಿಗೆ ಕೊಡುವುದಾಗಿ ತಾವೇ ಒಪ್ಪಿಕೊಂಡ್ಡಿದ್ದಿರಿ, ಆದ್ದರಿಂದ ಅದನ್ನು ಕೊಡಬೇಕೆಂದು ಅವರನ್ನು ಕೇಳಿದಾಗ ಮುಖ್ಯಮಂತ್ರಿಯವರ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಿ ಎಂದು ಅವರೇ ನನಗೆ ಸಲಹೆ ಕೊಟಿದ್ದರು. ಮುಖ್ಯಮಂತ್ರಿಯವರ ಸಭೆಯಲ್ಲೂ ಇದನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಆದರೆ, ನಾನು ಮುಖ್ಯ ಮಂತ್ರಿಯವರ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಪ್ರತಿಷ್ಠಿತ ರಕ್ಷಣಾ ಇಲಾಖೆಯ ಸಂಶೋದನಾ ಕೇಂದ್ರಗಳಾದ ಹೆಚ್.ಎ.ಎಲ್, ಇಸ್ರೋ, ಎನ್.ಎ.ಎಲ್, ಬಿ.ಇ.ಎಲ್. ಮತ್ತು ಜಾಗತಿಕ ಮಟ್ಟದ ಐ.ಟಿ., ಬಿ.ಟಿ.ಗಳು ಇರುವಂಥ ಬೆಂಗಳೂರಿಗೆ ಒಂದು ಎನ್.ಎಸ್.ಜಿ. ಕೊಡಬೇಕೆಂದು ಅತ್ಯಂತ ವಿನಯದಿಂದ ಮುಖ್ಯಮಂತ್ರಿಯವರ ಸಭೆಯಲ್ಲೂ ಹೇಳಿದ್ದೆ

ಜೊತೆಗೆ ಪ್ರಧಾನಿಯವರನ್ನು ಭೇಟಿ ಮಾಡಿ ಸಹ ವಿನಂತಿಸಿಕೊಂಡಿದ್ದೆ. ನಾವು ಎಷ್ಟೆಲ್ಲಾ ಪ್ರಯತ್ನ ಮಾಡಿದರೂ ಸಹ ಕೇಂದ್ರ ಸರ್ಕಾರ ಏಕೋ ಏನೋ ನಮಗೆ ಎನ್.ಎಸ್.ಜಿ. ಘಟಕವನ್ನು ಕೊಟ್ಟಿಲ್ಲ. ಆದ್ದರಿಂದ ನಾನು ಪ್ರತಿಪಕ್ಷದ ನಾಯಕರಲ್ಲಿ ರಾಜಕಾರಣವನ್ನು ಬೆರೆಸದೆಯೇ ಒಂದು ವಿನಂತಿಯನ್ನು ಮಾಡುತ್ತೇನೆ. ಈಗಲಾದರು ಇದು ಸಕಾಲ, ಕೈ ಮೀರಿ ಹೋದಮೇಲೆ ನಾವು ಪಶ್ಚಾತ್ತಾಪ ಪಡುವುದರ ಬದಲು ತಾವು ನಾವು ಎಲ್ಲರೂ ಒಟ್ಟಾಗಿ ಒಂದು ನಿಯೋಗ ಹೋಗಿ ಎನ್.ಎಸ್.ಜಿ. ಅಗತ್ಯ ಬೇರೆ ಎಲ್ಲಾ ರಾಜ್ಯ, ಪ್ರಮುಖ ನಗರಗಳಿಂದ ಬೆಂಗಳೂರಿಗೆ ಜಾಸ್ತಿ ಇದೆಯೆಂದು ಮನದಟ್ಟುಮಾಡಿ ಎನ್.ಎಸ್.ಜಿ. ಘಟಕ ನಮಗೆ ಸಿಗುವುದಕ್ಕೆ ಎಲ್ಲ ಸಹಕಾರವನ್ನು ತಾವು ನಮಗೆ ನೀಡಬೇಕು. ರಾಜ್ಯದಲ್ಲಿ ಕಳೆದ 7-8 ವರ್ಷಗಳಲ್ಲಿ ಸಣ್ಣ ಪುಟ್ಟ ಘಟನೆಗಳನ್ನು ಬಿಟ್ಟರೆ ಶಾಂತಿ ಮತ್ತು ನಿಮ್ಮದಿ ನೆಲೆಸುವುದಕ್ಕೆ ಸಮಾಜಘಾತಕ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ನಮ್ಮ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮುಂಬೈ ಘಟನೆಯ ನಂತರ ನಮ್ಮ ಸರ್ಕಾರ ಎಲ್ಲಾಪಕ್ಷದ ನಾಯಕರ ಸಭೆಯನ್ನು ಕರೆದು ಅವರುಗಳ ಸಲಹೆಯನ್ನು ಪಡೆದಿದ್ದೇನೆ. ಆ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆಯವರು, ಮಾನ್ಯ ಉಗ್ರಪ್ಪನವರು, ಮಾಜಿ ಮಂತ್ರಿಗಳು ಮತ್ತು ಇತರೆ ಎಲ್ಲ ಪ್ರಮುಖರು ಬಂದು ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ್ದರು. ನಮ್ಮ ಪೊಲೀಸ್ ಇಲಾಖೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡ ಬಯಸುತ್ತೇನೆ. 2008ರಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದಂತೆ ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶದ ರಾಜ್ಯಗಳಲ್ಲಿ ಒಟ್ಟು 18 ಅಪರಾಧಿಗಳನ್ನು ನಮ್ಮ ಪೊಲೀಸ್‌ನವರು ದಸ್ತಗಿರಿ ಮಾಡಿದ್ದಾರೆ. ಆ ರೀತಿ ನಮ್ಮ ಪೊಲೀಸರು ತೀವ್ರತರವಾದ ಗಮನವನ್ನು ಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕಳೆದ 8 ತಿಂಗಳಿನಲ್ಲಿ ಸಣ್ಣಪುಟ್ಟ ಘಟನೆಗಳು ನಡೆದಿರುವುದನ್ನು ಬಿಟ್ಟರೆ, ಆ ರೀತಿಯ ಘಟನೆಗಳೂ ನಡೆಯದಂತೆ ನಾವು ಕಟ್ಟೆಚ್ಚರ ವಹಿಸಬೇಕಾದದ್ದು ನಮ್ಮ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಮಂಗಳೂರು ಮತ್ತು ಕೆಲವು ಜಿಲ್ಲೆಗಳಲ್ಲಿ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿಗಳು ನಡೆದಾಗ 24 ಗಂಟೆಗಳಲ್ಲೇ ನಾವು ಮತ್ತು ನಮ್ಮ ಗೃಹ ಸಚಿವರು ಅಲ್ಲಿಗೆ ಹೋಗಿ ಸಂಬಂಧಪಟ್ಟವರನ್ನು ಭೇಟಿ ಮಾಡುವ ಪ್ರಯತ್ನ ಮಾಡಿದ್ದೇವೆ. 24 ಗಂಟೆಗಳಲ್ಲಿ ಅದನ್ನು ಕಂಟ್ರೋಲ್ ಮಾಡುವ ಪ್ರಯತ್ನ ಮಾಡಿದೆವು. ಈಗಾಗಲೇ ನಿವೃತ್ತ ನ್ಯಾಯಮೂರ್ತಿಗಳಾದಂಥ ಮಾನ್ಯ ಸೋಮಶೇಖರ್‌ರವರ ನೇತೃತ್ವದಲ್ಲಿ ಏಕ ಸದಸ್ಯ ಆಯೋಗವನ್ನು ರಚನೆ

ಮಾಡಿ ಆ ಘಟನಾವಳಿಯ ಬಗ್ಗೆ ತನಿಖೆಯನ್ನು ಮಾಡಿಸುತ್ತಿದ್ದೇನೆ. ರಾಜ್ಯದಲ್ಲಿ ನಕ್ಸಲಿಯ ಚಟುವಟಿಕೆಗಳ ಬಗ್ಗೆ ತೀವ್ರ ನಿಗವನ್ನು ಇಟ್ಟಿದ್ದು ಮಂಗಳೂರು ಜಿಲ್ಲೆಯ ಮಾವಿನ ಹೊಲದ ಹತ್ತಿರ ನಡೆದ ಗುಂಡಿನ ಚಕಮುಕಿಯಲ್ಲಿ ಮೂರು ನಕ್ಸಲಿಯರು ಮತ್ತು ಒಬ್ಬರು ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ.ಭಯೋತ್ಪಾದನೆ ಮತ್ತು ಇಂಥ ನಕ್ಸಲಿಯ ಚಟುವಟಿಕೆಗಳನ್ನು ಹತೋಟಿಯಲ್ಲಿಡುವುದಕ್ಕೆ ಸರ್ಕಾರ ಆಂತರಿಕ ಭದ್ರತಾ ವಿಭಾಗವನ್ನು ಮಾಡಿ ಅದಕ್ಕೆ 457 ಅಧಿಕಾರಿಗಳನ್ನು ನೇಮಕ ಮಾಡುವ ಕೆಲಸ ಮಾಡಿದ್ದೇವೆ. ಮಂಡ್ಯ ಜಿಲ್ಲೆಯಲ್ಲಿ ಮಾನ್ಯ ಮಾದೇಗೌಡರ ಮೇಲೆ ಚುನಾವಣೆಯ ನಂತರ ಏನು ಘಟನೆ ನಡೆಯಿತು ಅದರ ಬಗ್ಗೆ ತಕ್ಷಣವೇ ಕೇಸನ್ನು ದಾಖಲೆ ಮಾಡಿಕೊಂಡು ಕ್ರಮ ಕೈಗೊಳ್ಳುತ್ತಿದ್ದೇವೆ. ಕಾನೂನಿನಂತೆ ನಮಗೆ ಏನು ಸಾಧ್ಯವಿದೆಯೋ ಆ ಎಲ್ಲಾ ಪ್ರಯತ್ನವನ್ನು ನಾವು ಮಾಡಿದ್ದೇವೆ. ಹಾವೇರಿ ಘಟನೆಯ ಬಗ್ಗೆ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ವಿಚಾರಣೆ ಮಾಡಿಸುತ್ತಿದ್ದೇವೆ. ಬಹಳ ಪ್ರಮುಖವಾಗಿ ಶಾಸಕರಾ ಶ್ರೀ ರಮೇಶ್‌ಜಾರಕಿಹೊಳೆ ಮತ್ತು ಶ್ರೀ ಸತೀಶ್ ಜಾರಕಿಹೊಳೆಯವರ ಹತ್ಯೆಗೆ ಮಾಡಿದ್ದ ಸಂಚನ್ನು ಪೊಲೀಸ್‌ನವರು ಪತ್ತೆಮಾಡಿ ಆರೋಪಿಯನ್ನು ಕೂಡಲೆ ಬಂಧಿಸಿ ಸೂಕ್ತ ಕ್ರಮ ಕೈಗೊಂಡಿದ್ದಾರೆ. ಅದರ ತನಿಖೆಯನ್ನು ಮುಂದುವರೆಸಿದ್ದೇವೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮಗಳ ಗಮನಕ್ಕೆ ತರಬಯಸುತ್ತೇನೆ. ಭದ್ರಾವತಿ ತಾಲ್ಲೂಕಿನ ಬಾರೊಂದೂರಿನಲ್ಲಿ ಜಾತ್ರೆ ನಡೆಯುವ ಸಂದರ್ಭದಲ್ಲಿ ಸಂಗಮೇಶ್ವರರು ಮತ್ತು ಅವರ ಅನುಯಾಯಿಗಳು ಹಾಗೂ ಮಾಜಿ ಶಾಸಕರಾದ ಅಪ್ಪಾಜಿಗೌಡರು ಮತ್ತು ಅವರ ಅನುಯಾಯಿಗಳ ನಡುವೆ ಜಾತ್ರೆಯಲ್ಲಿ ಭಾಷಣ ಮಡುವ ವಿಚಾರದಲ್ಲಿ ವೈಮನಸ್ಸು ಬೆಳೆದು ಏನು ಘಟನೆ ನಡೆಯಿತು ಅದರ ಬಗ್ಗೆ ನಾನು ಸವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಸಿ.ಒ.ಡಿ. ಗೆ ವಹಿಸಿದ್ದೇವೆ. ಸಹ ವೃತ್ತ ನಿರೀಕ್ಷಕರಾಗಿದ್ದ ಡಿ.ಎಂ. ಬಸವರಾಜುರವರನ್ನು ತಾವೆಲ್ಲ ಒತ್ತಾಯ ಮಾಡಿದಂತೆ ತಕ್ಷಣ ವರ್ಗಾವಣೆ ಮಾಡಿ ಒಳ್ಳೆಯ ಅಧಿಕಾರಿಯನ್ನು ಅಲ್ಲಿಗೆ ಹಾಕುವವರಿದ್ದೇವೆ. ಯಾವುದೇ ವರ್ಗ ಅಥವಾ ವಿದ್ಯಾರ್ಥಿಗಳನ್ನು ನಾವು ಕಾನೂನು ಮತ್ತು ಸುವ್ಯವಸ್ಥೆ ವಿಚಾರಗಳಲ್ಲಿ ಬಳಸಿಕೊಳ್ಳುವುದಿಲ್ಲ. ನಾವು ಎಲ್ಲಾ ವಿಷಯದಲ್ಲಿ ರಾಜಕಾರಣವನ್ನು ಮಾಡುವುದು ಬೇಡವೆಂದು ವಿನಂತಿಯನ್ನು ತಮ್ಮಲ್ಲಿ ಮಾಡುತ್ತೇನೆ. ತಾವು ನಿಜಕ್ಕೂ ನಮ್ಮನ್ನು ಅಪ್ರೀಶೀಯೇಟ್ ಮಾಡಬೇಕಾಗಿತ್ತು. ಒಂದು ಸರ್ಕಾರ ಭಯೋತ್ಪಾದನೆಯ ಬಗ್ಗೆ ಕೇಂದ್ರ ಸರ್ಕಾರ ಇಷ್ಟೊಂದು ಆತಂಕಕ್ಕೆ ಒಳಗಾಗಿ ಸಂಬಂಧ ಪಟ್ಟ ಮುಖ್ಯಮಂತ್ರಿಗಳೊಂದಿಗೆ ಸಮಲೋಚನೆ ಮಾಡಿ

ಸುದೀರ್ಘವಾದ ಚರ್ಚೆಯಾದಮೇಲೆ ಆಯಾಯ ರಾಜ್ಯಗಳು ಇದನ್ನು ಬಂದೋಬಸ್ತ್ ಮಾಡುವುದಕ್ಕೆ ನಮ್ಮ ಮೇಲೆಯೇ ಕಾರ್ಯಭಾರವನ್ನು ಹಾಕಿದಾಗ ನಾವು ಈ ನಾಡಿನ ಯುವ ಪೀಳಿಗೆಯಲ್ಲಿ, ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ದೇಶಭಕ್ತಿಯನು ಬೆಳೆಸಬೇಕು, ಜಾಗೃತಿಯನ್ನು ಮೂಡಿಸಬೇಕು..

ಶ್ರೀ ಡಿ.ಕೆ. ಶಿವಕುಮಾರ್ :- ಆ ಕೆಲಸವನ್ನು ನೀವು ಮಾಡಿದ್ದರೆ ನಾವು ನಿಮ್ಮನ್ನು ಕೇಳುತ್ತಲೇ ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಕಾಮಾಲೆ ಕಣ್ಣಿನವರಿಗೆ ಕಾಣುವುದೆಲ್ಲಾ ಹಳದಿಯೇ ಎಂಬ ಗಾದೆ ಮಾತು ಇದೆ! ಆ ರೀತಿ ನಿಮ್ಮದಾಗಿದೆ. ಮಾನ್ಯ ಶಿವಕುಮಾರ್‌ರವರ ಬಗ್ಗೆ ನನಗೆ ಗೌರವವಿದೆ.

ಶ್ರೀ ಡಿ.ಕೆ. ಶಿವಕುಮಾರ್ :- ಶಿಕ್ಷಣ ಸಚಿವರು ಕೇವಲ ರಾಜಕಾರಣ ಮಾಡುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :- ಇವರು ಪ್ರತಿಯೊಂದರಲ್ಲೂ ರಾಜಕಾರಣವನ್ನು ಹುಡುಕಲು ಪ್ರಯತ್ನಪಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಶಿವಕುಮಾರ್‌ರವರು ವಿರೋಧ ಪಕ್ಷದಲ್ಲಿದ್ದು ಅಷ್ಟನ್ನೂ ತಿಳಿದುಕೊಂಡು ಹೇಳದಿದ್ದರೆ ಯಡಿಯೂರಪ್ಪ ಮತ್ತು ಶಿವಕುಮಾರ್‌ರವರೆಲ್ಲರು ಒಟ್ಟಿಗೇ ಇದ್ದಾರೆಂದು ಜನರು ಭಾವಿಸುತ್ತಾರೆ. ಆದ್ದರಿಂದ, ತಾವು ಹೇಳಿರುವುದು ಸರಿ ಇದೆ. ಅದರಲ್ಲಿ ತಪ್ಪೇನಿಲ್ಲ. ತಾವು ಪ್ರತಿಪಕ್ಷದಲ್ಲಿದ್ದು ಟೀಕೆ ಮಾಡಿ. ನಾವು ಎಲ್ಲದರಲ್ಲೂ ಪರಿಪೂರ್ಣ, ಎಲ್ಲವನ್ನು ನಾವು ಮಾಡಿ ಮುಗಿಸಿದ್ದೇವೆ, ಮಾಡುವುದು ಏನೂ ಉಳಿದಿಲ್ಲವೆಂದು ಖಂಡಿತ ಹೇಳುವುದಿಲ್ಲ. ನಾವು ಮಾಡಬೇಕಾಗಿರುವುದು ಇನ್ನು ಬಹಳಷ್ಟಿದೆ. ಕಾನೂನು ಸುವ್ಯವಸ್ಥೆಯ ಬಗ್ಗೆ ಇನ್ನೂ ಬಿಗಿಯಾದ ಕ್ರಮ ಕೈಗೊಳ್ಳಬೇಕಾಗಿದೆ. ಉಗ್ರಗಾಮಿಗಳ ತಾಂಡವನೃತ್ಯ ಮೇಲೆ ಏಳದಂತೆ ನೋಡಿಕೊಳ್ಳಬೇಕಾಗಿದೆ. ನಕ್ಸಲಿಯ ಚಟುವಟಿಕೆಗಳನ್ನು ಹತ್ತಿಕ್ಕಬೇಕಾಗಿದೆ. ನಾನು ಒಂದು ಸಲಹೆಯನ್ನು ತಮಗೆ ಕೊಡುತ್ತೇನೆ. ಇವತ್ತು ಶಾಲಾಕಾಲೇಜುಗಳಲ್ಲಿ ಸಚಿವ ಸಂಪುಟದ ನಮ್ಮ ಸದಸ್ಯರು ಹೋಗಿ ಆ ಯುವಕರಲ್ಲಿ ಭಯೋತ್ಪಾದನೆಯ ಬಗ್ಗೆ ಒಂದು ಜಾಗೃತೆಯನ್ನು ಮೂಡಿಸಿ ಒಂದು ಸಂಕಲ್ಪ ಪ್ರಮಾಣವಚನ ಸ್ವೀಕಾರ ಮಾಡಿಸಿ ದೇಶಕ್ಕಾಗಿ ಇದು ನಿಮ್ಮ ಕರ್ತವ್ಯ, ಈ ದಿಕ್ಕಿನಲ್ಲಿ ನೀವು ಜಾಗೃತರಾಗಬೇಕು ಎಂದು ಮಾಡುತ್ತಿದ್ದೇವೆ. ನೀವೂ ಕೆಲವು ಆ ಕಾರ್ಯಕ್ರಮದಲ್ಲಿ ಬಂದು ಭಾಗವಹಿಸಿ. ನಾವೇನಾದರು ಅದರಲ್ಲಿ

ರಾಜಕಾರಣ ಬೆರೆಸಿದ್ದೇವೆಂದು ಗೊತ್ತಾದರೆ, ನಿಮ್ಮೆಲ್ಲರನ್ನು ನಾನು ಆಹ್ವಾನಿಸುತ್ತಿದ್ದೇನೆ, ತಾಲ್ಲೂಕು ಮಟ್ಟದಲ್ಲಿ ಅದನ್ನು ನಾವು ಮಾಡುತ್ತಿದ್ದೇವೆ. ನೀವುಗಳೂ ಕಾಲೇಜುಗಳಿಗೆ ಹೋಗಿ ಈ ಬಿ.ಜೆ.ಪಿ.ಯವರು ಈ ಸರ್ಕಾರ ಈಗೇನು ಶಾಲಾಕಾಲೇಜುಗಳಲ್ಲಿ ಬಂದು ಸ್ವಾಮಿ ವಿವೇಕಾನಂದರ ಹೆಸರನ್ನು ಉಪಯೋಗಿಸಿಕೊಂಡು ಜಾಗೃತಿ ಮಾಡುತ್ತಿದ್ದೇವೆ ಅದು ಅರಿಯಲ್ಲ, ಯುವಕರನ್ನು ಇದಕ್ಕೆ ತರಬೇಡಿ, ಭಯೋತ್ಪಾದನೆಗೂ ಇದಕ್ಕು ಏನೂ ಸಂಬಂಧವಿಲ್ಲವೆಂದು ನೀವು ಬೇಕಾದರೆ ಒಂದು ಆಂದೋಲನವನ್ನು ಮಾಡಿ.

ಶ್ರೀ ಆರ್. ರೋಷನ್‌ಬೇಗ್ :- ಎನ್.ಸಿ.ಸಿ. ಯನ್ನು ಕಡ್ಡಾಯ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಎನ್.ಸಿ.ಸಿ.ಯನ್ನು ಉಪಯೋಗಿಸಿಕೊಳ್ಳೋಣ. ಎಲ್ಲಾ ನಮ್ಮ ಸಂಘಟನೆಗಳು, ಬಿ.ಜೆ.ಪಿ., ಜೆ.ಡಿ.ಎಲ್., ಕಾಂಗ್ರೆಸ್ ಮತ್ತು ಎಲ್ಲಾ ಪಕ್ಷಗಳಲ್ಲಿ ಯುವಕರ ವಿಂಗ್ ಇದೆ. ಅವರನ್ನು ಉಪಯೋಗಿಸಿಕೊಳ್ಳೋಣ. ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆ ಮೊನ್ನೆಯಿಂದ ಸ್ವಲ್ಪ ಒಳ್ಳೆಯ ರೀತಿಯಲ್ಲಿ ಚರ್ಚೆಗಳಾಗುತ್ತಿದೆ. ಇನ್ನು ಮೂರು ನಾಲ್ಕು ದಿವಸ ಒಳ್ಳೆಯ ಚರ್ಚೆ ಮಾಡಿ ಈ ಜ್ವಲಂತ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲರು ಒಟ್ಟಾಗಿ ಹೋಗೋಣ. ಇಲ್ಲಿ ನಮಗೆ ಇಷ್ಟು ಜವಾಬ್ದಾರಿ ಇದೆಯೊ ಅಷ್ಟೇ ಜವಾಬ್ದಾರಿ ನಿಮಗೂ ಇದೆ. ಮೂರುದಶಕಗಳ ಕಾಲ ನಾವು ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿಕೊಂಡು ಬಂದಿರುವವರು. ಅಲ್ಲಿದ್ದಾಗ ನಾವು ಟೀಕೆ ಮಾಡಿದ್ದೇವೆ. ನಿಮಗಿಂತ ನಾವು ಹೆಚ್ಚು ಟೀಕೆ ಮಾಡಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆಡಳಿತ ಪಕ್ಷದಲ್ಲಿದ್ದಾಗ ನಾವು ಅಲ್ಲಿ ಕುಳಿತು ಏನು ಟೀಕೆ ಟಿಪ್ಪಣಿಯನ್ನು ಮಾಡಿದ್ದೇವೆ ಆ ತಪ್ಪು ಆಗದಂತೆ ಎಚ್ಚರಿಕೆಯನ್ನು ವಹಿಸಿ ಆಡಳಿತ ಮಾಡುವುದು ನಮ್ಮ ಕರ್ತವ್ಯ. ಅಲ್ಲಿ ನಾವೇನಾದರೂ ಎಡವಿದರೆ, ತಪ್ಪು ಮಾಡಿದರೆ ಮಾರ್ಗದರ್ಶನ ಮಾಡುವುದಕ್ಕೇ ನೀವು ಪ್ರತಿಪಕ್ಷದವರು ಇರುವುದು. ನೀವು ಆಡಳಿತ ಪಕ್ಷದಲ್ಲಿದ್ದು ನಿಮ್ಮ ಅನುಭವವೇನಿದೆ ಅದನ್ನು ನಮ್ಮೊಂದಿಗೆ ಹಂಚಿಕೊಂಡರೆ ಖಂಡಿತ ನಾವು ಸರಿಪಡಿಸಿಕೊಂಡು ಒಳ್ಳೆಯ ಆಡಳಿತವನ್ನು ಕೊಡಲು ಸಿದ್ದರಿದ್ದೇವೆ. ಇಲ್ಲಿ ರಾಜಕಾರಣ ಬೆಳೆಸುವುದು ಬೇಡ. ಆದ್ದರಿಂದ ಸ್ವಾಮಿ ವಿವೇಕಾನಂದ ಜಯಂತಿಯನ್ನು ಮಾಡುತ್ತ ಯುವಕರಲ್ಲಿ ಜಾಗೃತಿಯನ್ನು ಮೂಡಿಸುವಂಥ ಆಂದೋಲನವನ್ನು ನಾವೇನು ದೇಶದಲ್ಲೇ ಮೊದಲ ಬಾರಿಗೆ ಮಾಡುತ್ತಿದ್ದೇವೆ ಅದರಲ್ಲಿ ಎಲ್ಲ ಪಕ್ಷದವರು ಪಾಲ್ಗೊಳ್ಳಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಸೀತಾರಾಂರವರ ಮೇಲೆ private complaint ಇತ್ತು. ಅವರ ಮೇಲೆ ಭೋಜಶೆಟ್ಟಿ ಎನ್ನುವವರು complaint ಕೊಟ್ಟಿದ್ದರು. ಅವರ ಮೇಲೆ court warrant ಇತ್ತು, ಅವರು ಹೋಗಿರಲಿಲ್ಲ. ಹೀಗಾಗಿ ಕಾನೂನಿನಂತೆ ಪೊಲೀಸರು ಕೆಲಸ ಮಾಡಿದ್ದಾರೆ. ಅದಕ್ಕೂ ಸರ್ಕಾರಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಆರ್. ರೋಷನ್ ಬೇಗ್ :- Handcuff ಹಾಕಬಾರದು ಎಂದು Supreme Court ruling ಇದೆ.

ಶ್ರೀ ಬಿ. ರಮಾನಾಥ ರೈ :- ಮಾನ್ಯ ಅಧ್ಯಕ್ಷರೆ, ವೈಯಕ್ತಿಕ ವಿಚಾರವನ್ನೇನೂ ನಾನು ಇಲ್ಲಿ ಮಾತನಾಡುವುದಿಲ್ಲ. ಪತ್ರಿಕೆಗಳಿಗೆ ಬೆಂಕಿ ಹಾಕತಕ್ಕದ್ದು ಮತ್ತು ಇತರ ಅನೇಕ ಘಟನೆಗಳು ನಡೆದಿವೆ. ಆ ಪತ್ರಿಕೆ, ಈ ಪತ್ರಿಕೆ ಎನ್ನುವುದಿಲ್ಲ. ಯಾವುದೇ ಪತ್ರಿಕೆಗೆ ತೊಂದರೆಯಾದರೂ ಕೂಡ, ಅದು ನಮ್ಮ ಮೇಲೆಯೇ ಬರುತ್ತದೆ. ಯಾವುದೇ ಪತ್ರಿಕೆಗೆ ತೊಂದರೆಯಾದರೂ ಕೂಡ, ನಾವು ಖಂಡಿತವಾಗಿಯೂ ಅದರ ಬಗ್ಗೆ ಮಾತನಾಡುತ್ತೇವೆ...

ಅಧ್ಯಕ್ಷರು :- ಮಾನ್ಯ ರೈರವರೆ, ಈಗಾಗಲೇ ಅದನ್ನೆಲ್ಲಾ ಹೇಳಿದ್ದೀರಿ.

ಶ್ರೀ ಬಿ. ರಮಾನಾಥ ರೈ :- ಎಲ್ಲಾ ಹಳ್ಳಿಗಳಲ್ಲೂ ಪತ್ರಿಕೆಗಳಿಗೆ ಬೆಂಕಿ ಹಾಕು ಸುಡುವಂತಹ ಕೆಲಸವಾಯಿತು. ಮತ್ತೆ ಈ ಘಟನೆ ನಡೆಯಿತು...

ಅಧ್ಯಕ್ಷರು :- ಆಯಿತು, ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಸುದೀರ್ಘವಾಗಿ ನಾಲ್ಕು ಗಂಟೆಗಳ ಕಾಲ ನಡೆದ ಚರ್ಚೆಗೆ ಕನಿಷ್ಟ ಒಂದು ಗಂಟೆಯಾದರೂ ಉತ್ತರ ಕೊಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಒಂದು ಮಾತನ್ನು ನಾನು ಹೇಳುತ್ತೇನೆ. ಭಯೋತ್ಪಾದನೆಯನ್ನು ನಿರ್ಮೂಲನ ಮಾಡುವಂತಹ ವಿಚಾರದಲ್ಲಿ ರಾಜಕಾರಣ ಇಲ್ಲ. ಭಯೋತ್ಪಾದನೆ ವಿಚಾರದಲ್ಲಿ ವಿಶೇಷವಾಗಿ ಕಾಂಗ್ರೆಸ್ ಪಕ್ಷ ತೆತ್ತಿರತಕ್ಕ ಬೆಲೆಯನ್ನು ತುಂಬಲಿಕ್ಕೆ ಸಾಧ್ಯವಿಲ್ಲ. ಅದು ಶ್ರೀಮತಿ ಇಂದಿರಾಗಾಂಧಿಯವರು ಇರಬಹುದು ಅಥವಾ ಶ್ರೀ ರಾಜೀವ್ ಗಾಂಧಿಯವರು ಇರಬಹುದು. ಆದರೆ ಅದನ್ನು ಬುಡ ಸಮೇತವಾಗಿ ಕಿತ್ತು ಹಾಕಲು ಕೇವಲ ಯುವಕರನ್ನು ಪ್ರಚೋದನೆ ಮಾಡುವುದರಿಂದ ಮಾತ್ರವೇ ಸಾಧ್ಯವಿಲ್ಲ. ಯಾರೋ

ಕೆಲವರು ಮಾಡತಕ್ಕಂಥ ಭಯೋತ್ಪಾದನೆಯನ್ನು ಯಾವ ರೀತಿ ತಡೆಯಬೇಕು? ಅದನ್ನು ಗುಂಡಿನಿಂದ ನಿಲ್ಲಿಸಬೇಕೇ? ಅಥವಾ ರಾಜತಾಂತ್ರಿಕ ನೈಪುಣ್ಯದಿಂದ ನಿಲ್ಲಿಸಬೇಕೆಂಬ ಬಗ್ಗೆ ನಾವು ಯೋಚನೆ ಮಾಡಬೇಕಾದುದು ಮುಖ್ಯ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ಬೇಗ ಮುಗಿಸಿ.

ಶ್ರೀ ಟಿ.ಬಿ.ಜಯಚಂದ್ರ :- NSG ಘಟಕದ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಂತಹ ಸಂದರ್ಭದಲ್ಲಿ, ರಾಜ್ಯದ ಪರವಾಗಿ ನಾವೆಲ್ಲಾ ಶಾಸಕರು ಮತ್ತು ಮುಖಂಡರುಗಳೆಲ್ಲರೂ ಕೂಡ ಹೋಗಿ, 'ನಮಗೆ NSG ಘಟಕ ಬೇಕು' ಎನ್ನತಕ್ಕಂಥ ಒತ್ತಾಯವನ್ನು ಮಾಡಿದ್ದೇವೆ. ಅದರ ಬಗ್ಗೆ ಎರಡನೇ ತಕರಾರು ಇಲ್ಲ. ಬೆಂಗಳೂರಿಗೆ NSG ಘಟಕ ಬೇಕು, ಅದಕ್ಕೆ ನಾವು ಯಾವುದೇ ರೀತಿಯಲ್ಲೂ ಅಪಸ್ವರ ಎತ್ತುವುದಿಲ್ಲ. ಆ ವಿಚಾರದಲ್ಲಿ ನಾವು ನಿಮ್ಮ ಜೊತೆಗಿದ್ದೇವೆ ಎಂಬ ಮಾತನ್ನು ಹೇಳ ಬಯಸುತ್ತೇನೆ. ನಾವೂ ಕೂಡ ನಮ್ಮ ಪಕ್ಷದ ವತಿಯಿಂದ, ಏನೆಲ್ಲಾ ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ.

ಅಧ್ಯಕ್ಷರು :- ಆಯಿತು, ಬೇಗ ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಮುಖ್ಯವಾಗಿ ನಕ್ಸಲೀಯರ activities ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ತುಮಕೂರು ಜಿಲ್ಲೆಯಲ್ಲಿ ಅದು ಸಾಕಷ್ಟು ಆಗುತ್ತಿದೆ. ಎಲ್ಲೆಲ್ಲೂ ಬಾಂಬ್‌ಗಳು ಸಿಗುತ್ತಿವೆ. ನನ್ನ ಕ್ಷೇತ್ರದಲ್ಲೂ ಸಹ ಅಂತಹ ಬೆಳವಣಿಗೆಗಳಾಗಿವೆ. ಇದನ್ನು ತಡೆಗಟ್ಟುವ ದಿಕ್ಕಿನಲ್ಲಿ, ನೀವು ಬೇರೆ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ border areasನಲ್ಲಿ police stations ಸಹ ಜಾಸ್ತಿ ಆರಂಭಿಸುವುದು ಇಂತಹ ಚಟುವಟಿಕೆಗಳ ಬಗ್ಗೆ ನಿಗಾ ವಹಿಸಲು ಮುಖ್ಯವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು :- ಆಯಿತು, ಬೇಗ ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಪ್ರಧಾನ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಚರ್ಚ್‌ಗಳ ಮೇಲೆ ಆಗತಕ್ಕಂಥ ದಾಳಿಯಿಂದಾಗಿ ಇವತ್ತು ದೇಶ ತಲೆ ತಗ್ಗಿಸುವಂತಾಗಿದೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು National Council Meetingನಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಂತಹ ಸಂದರ್ಭದಲ್ಲೂ ಕೂಡ ಮಾನ್ಯ ಪ್ರಧಾನ

ಮಂತ್ರಿಗಳು ಆ ರೀತಿ ಹೇಳಿದ್ದಾರೆ. ಇದನ್ನೆಲ್ಲಾ ನೋಡಿದರೆ ನನಗನಿಸುತ್ತಿದೆ. ಬಹುಶ: ನಾನು ಇಷ್ಟು ಹೊತ್ತು ಆ ಕಡೆ ಮತ್ತು ಈ ಕಡೆಯ ಸದಸ್ಯರೆಲ್ಲರೂ ಕೂಡ ಸರ್ಕಾರದ ವೈಫಲ್ಯ ಏನು ಎಂಬುದನ್ನು ಮನದಟ್ಟು ಮಾಡಿ, ಅದನ್ನು ಸಾಬೀತು ಮಾಡಿ ತೋರಿಸತಕ್ಕಂಥ ರೀತಿಯಲ್ಲಿ ಹೇಳಿದ್ದಾಗ್ಯೂ ಕೂಡ, ಎಲ್ಲೋ ಒಂದು ಕಡೆ ನಾನು ಮನಸ್ಸಿನಲ್ಲಿ ಅಂದುಕೊಂಡಿದ್ದೆ, ಆದರೆ ಬಹಿರಂಗವಾಗಿ ಹೇಳಿರಲಿಲ್ಲ. ನಮ್ಮ ಮಾತು ಕೇಳಿ ಮಾನ್ಯ ಯಡಿಯೂರಪ್ಪನವರು ಏನೋ ತಿದ್ದಿಕೊಳ್ಳುತ್ತಾರೆ ಅಥವಾ ರಾಜೀನಾಮೆ ಕೊಟ್ಟು ಹೋಗುತ್ತಾರೆಂಬ ಭಾವನೆ ನನಗಿತ್ತು.

ಅಧ್ಯಕ್ಷರು :- ಆಯಿತು, ಬೇಗ ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಆದರೆ ಸರ್ಕಾರ ಜವಾಬ್ದಾರಿಕೆಯನ್ನು ಹೊರಬೇಕು, ಸರ್ಕಾರ ಜವಾಬ್ದಾರಿಕೆಯನ್ನು ಹೊರದೇ.....

ಅಧ್ಯಕ್ಷರು :- ಇವತ್ತು ಮಾನ್ಯ ಸಚಿವರಾದ ಲಕ್ಷ್ಮಣ ಸವದಿಯವರು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ದಯವಿಟ್ಟು ಅದರಲ್ಲಿ ಎಲ್ಲರೂ ಭಾಗವಹಿಸಬೇಕು. ಈಗ ಸದನವನ್ನು ಪುನ: 3.30 ಗಂಟೆಗೆ ಸೇರುವಂತೆ ಮುಂದಕ್ಕೆ ಹಾಕಿದ್ದೇನೆ.

[ಸದನವನ್ನು ಮಧ್ಯಾಹ್ನ 2.44 ಗಂಟೆಗೆ ಭೋಜನ ವಿರಾಮಕ್ಕಾಗಿ ಮುಂದೂಡಲಾಯಿತು.

ಸದನವು ಪುನ: ಮಧ್ಯಾಹ್ನ 3.30 ಗಂಟೆಗೆ ಸೇರಲು ತೀರ್ಮಾನಿಸಿತು]

(ಸದನವು ಮತ್ತೆ ಮಧ್ಯಾಹ್ನ 3 ಗಂಟೆ 55 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಉಪಸ್ಥಿತರಿದ್ದರು)